ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 132 RNI Number : KNKAN/25/A2770 21-05-2026 Thursday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :132 ರಾಯಚೂರು 21-05-2026 ಗುರುವಾರ ಪುಟ 04 ಬೆಲೆ ರೂ.2/- ಮೊ:8660146563

ಆಧಾರ್ ಕೇವಲ ಗುರುತಿನ ಚೀಟಿ, ಅದು ಪೌರತ್ವ - ವಿಳಾಸದ ದಾಖಲೆಯಲ್ಲ: ಸುಪ್ರೀಂ ಕೋರ್ಟ್‌ಗೆ ಪಿಐಎಲ್

ನವದೆಹಲಿ: ಆಧಾರ್ ಕಾರ್ಡ್ ಅನ್ನು ಪೌರತ್ವ, ವಾಸಸ್ಥಳ ಮತ್ತು ವಸತಿ ವಿಳಾಸದ ಪುರಾವೆಯಾಗಿ ಬಳಸುತ್ತಿರುವುದು ತಪ್ಪು. ಈ ದಾಖಲೆಯನ್ನು ಕೇವಲ ಗುರುತಿನ ಚೀಟಿಯಾಗಿ ಮಾತ್ರ ಬಳಸುವಂತೆ ಕಟ್ಟುನಿಟ್ಟಿನ ನಿರ್ದೇಶನ ನೀಡಲು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಕೆಯಾಗಿದೆ.

ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಈ ಅರ್ಜಿಯನ್ನು ಹಾಕಿದ್ದು, ಆಧಾರ್ ಕಾರ್ಡ್ ಅನ್ನು ಕೇವಲ ಗುರುತಿನ ಪುರಾವೆಯಾಗಿ ಬಳಸಬೇಕೇ ಹೊರತು ಪೌರತ್ವ, ವಾಸಸ್ಥಳ, ವಿಳಾಸ ಮತ್ತು ಜನ್ಮ ದಿನಾಂಕದ ಪುರಾವೆಯಾಗಿ ಬಳಸದಂತೆ ಕೇಂದ್ರ ಸರ್ಕಾರ, ರಾಜ್ಯಗಳು ಮತ್ತು ಭಾರತೀಯ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡುವಂತೆ ವಿನಂತಿಸಿದ್ದಾರೆ.

ವಕೀಲ ಅಶ್ವಾನಿ ದುಬೆ ಅವರ ಮೂಲಕ ಸಲ್ಲಿಕೆಯಾಗಿರುವ ಈ ಅರ್ಜಿಯು, ಹೊಸ ಮತದಾರರ ನೋಂದಣಿ ಅರ್ಜಿಯಲ್ಲಿ ಆಧಾರ್ ಅನ್ನು ಜನ್ಮ ದಿನಾಂಕ ಮತ್ತು ವಾಸಸ್ಥಳದ ಪುರಾವೆಯಾಗಿ ಬಳಸುವುದನ್ನು ಆಧಾರ್ ಕಾಯ್ದೆ 2016 ಸೆಕ್ಷನ್ 9, ಜನಪ್ರತಿನಿಧಿ ಕಾಯ್ದೆ (ಆರ್‌ಪಿಎ) 1950 ರ ಸೆಕ್ಷನ್ 23(4) ಮತ್ತು ಸಂವಿಧಾನದ ವಿಧಿ 14ರ ಉಲ್ಲಂಘನೆ ಎಂದು ಪರಿಗಣಿಸಲು ನಿರ್ದೇಶನಗಳನ್ನು ಕೋರಲಾಗಿದೆ.

ಆಧಾರ್ ಕಾಯ್ದೆ 2016 ಸೆಕ್ಷನ್ 9 ರ ಪ್ರಕಾರ ಆಧಾರ್ ಪೌರತ್ವ ಅಥವಾ ವಾಸಸ್ಥಳದ ಪುರಾವೆಯಲ್ಲ ಎಂದು ಸ್ಪಷ್ಟವಾಗಿ ಹೇಳುತ್ತದೆ. ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರದ () ಆಗಸ್ಟ್ 22, 2023 ರ ಅಧಿಸೂಚನೆಯೂ ಸಹ ಆಧಾರ್ ಗುರುತಿನ ಪುರಾವೆಯೇ ಹೊರತು ಪೌರತ್ವ, ವಿಳಾಸ ಅಥವಾ ಜನ್ಮ ದಿನಾಂಕದ ಪುರಾವೆಯಲ್ಲ ಎಂದು ಸ್ಪಷ್ಟಪಡಿಸಿದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ಹೀಗಿದ್ದೂ, ಆಧಾರ್ ಅನ್ನು ಶಾಲಾ ದಾಖಲಾತಿ, ಆಸ್ತಿ ಖರೀದಿ, ಜನನ ಪ್ರಮಾಣಪತ್ರ, ಪಡಿತರ ಚೀಟಿ ಮತ್ತು ಚಾಲನಾ ಪರವಾನಗಿ ಪಡೆಯಲು ವಯಸ್ಸು , ಪೌರತ್ವ ಮತ್ತು ವಾಸಸ್ಥಳದ ಪುರಾವೆಯಾಗಿ ಬಳಸಲಾಗುತ್ತಿದೆ.

ಅಷ್ಟೇ ಅಲ್ಲದೆ, ಹೊಸ ಮತದಾರರ ನೋಂದಣಿ ಅರ್ಜಿಯಲ್ಲಿಯೂ (ಫಾರಂ-6) ಇದನ್ನು ಜನ್ಮ ದಿನಾಂಕ ಮತ್ತು ವಾಸಸ್ಥಳದ ಪುರಾವೆಯಾಗಿ ಬಳಸಲಾಗುತ್ತಿದೆ. ಇದರಿಂದಾಗಿ, ನುಸುಳುಕೋರರು ಮತ್ತು ಅಕ್ರಮ ವಲಸಿಗರು ಆಧಾರ್ ಬಳಸಿ ವಿವಿಧ ಅಧಿಕೃತ ದಾಖಲೆಗಳನ್ನು ಪಡೆಯುತ್ತಿದ್ದಾರೆ ಎಂದು ಅರ್ಜಿಯಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ.

ಪ್ರಸ್ತುತ ಫಾರಂ - 6 ರ ಅಡಿಯಲ್ಲಿರುವ ಪರಿಶೀಲನಾ ವ್ಯವಸ್ಥೆಯು ದೋಷಪೂರಿತವಾಗಿದ್ದು, ಸರಿಯಾದ ಪೂರಕ ದಾಖಲೆಗಳಿಲ್ಲದ ವ್ಯಕ್ತಿಗಳೂ ಸಹ ಮತದಾರರ ಪಟ್ಟಿಗೆ ಸೇರ್ಪಡೆಯಾಗಲು ಇದು ಅವಕಾಶ ಮಾಡಿಕೊಡಬಹುದು ಎಂದು ಅರ್ಜಿದಾರರು ವಾದಿಸಿದ್ದಾರೆ.

ಚುನಾವಣಾ ಪ್ರಕ್ರಿಯೆಗಳಲ್ಲಿ ಬಳಸಲಾಗುವ ಪರಿಶೀಲನಾ ಚೌಕಟ್ಟನ್ನು ಸಮಗ್ರವಾಗಿ ಸುಧಾರಿಸಬೇಕು. ಈ ಸುಧಾರಣೆಗಳ ಮೇಲ್ವಿಚಾರಣೆಗಾಗಿ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಾಧೀಶರು, ಸೈಬರ್ ಸುರಕ್ಷತೆ ಹಾಗೂ ವಿಧಿವಿಜ್ಞಾನ (ಫೋರೆನ್ಸಿಕ್) ತಜ್ಞರನ್ನೊಳಗೊಂಡ ಉನ್ನತ ಮಟ್ಟದ ಉಸ್ತುವಾರಿ ಸಮಿತಿಯನ್ನು ರಚಿಸಬೇಕು ಎಂದು ಅರ್ಜಿ ಪೀಠವನ್ನು ಕೋರಿದೆ.

ವಿಜೃಂಭಣೆಯಿಂದ ಶ್ರೀ ಕೋದಂಡರಾಮಸ್ವಾಮಿ ರಜತೋತ್ಸವ 2 ದಿನ ವಿವಿದ ಕಾರ್ಯಕ್ರಮಕ್ಕೆ ತೆರೆ

ಸಿರವಾರ.ಮೇ.20-

ಎರಡು ದಿನಗಳಿಂದ ಶ್ರೀ ಕೊದಂಡ ರಾಮನಿಗೆ ವಿವಿಧ ಪೂಜೆ ಕೈಂಕಾರ್ಯಗಳು, ಗಂಗಾರತಿ, ಗಣಹೋಮ,ಪಟ್ಟಾಭಿಷೇಕ ಇನ್ನಿತರ ಪೂಜೆಗಳು ಮಾಡುವ ಮೂಲಕ ವಿಜೃಂಬಣೆಯಿಂದ ರಜತ ಮಹೋತ್ಸವದ ಕಾರ್ಯಕ್ರಾಮಗಳು ಮುಕ್ತಾಯವಾದವು. ತಾಲೂಕಿನ ಅತ್ತನೂರು ಕ್ಯಾಂಪಿನ ಶ್ರೀ ಕೋದಂಡ 'ರಾಮಸ್ವಾಮಿ ದೇವಸ್ಥಾನ ನಿರ್ಮಿಸಿ 25 ವರ್ಷಾಚರಣೆ (ರಜತಮಹೋತ್ಸವ) ಪ್ರಯುಕ್ತ ಮೇ 19 ಮಂಗಳವಾರ ಮತ್ತು 20 ಬುದುವಾರ ಎರಡು ದಿನಗಳ ಕಾಲ ಸಂಭ್ರಮ ವೈಭವದಿಂದ ಗಾಡೇಪಲ್ಲಿ ಸತ್ಯನಾರಾಯಣಮೂರ್ತಿ ಶರ್ಮ



(ಸಿರವಾರ ಪುರೋಹಿತರು) ಇವರ ನೇತೃತ್ವದಲ್ಲಿ ಟಿ.ಟಿ.ಡಿ. ದೇವಸ್ಥಾನ ಆಗಮ ಪಂಡಿತರಾದ ಗಾಡೇಪಲ್ಲಿ ವೇಂಕಟಸೂರ್ಯಜಗನ್ನಾಥಚಾರ್ಯರು (ರವಿ) ಇವರ ನೇತೃತ್ವದಲ್ಲಿ ಶ್ರೀಶ್ರೀಶ್ರೀಸೀತಾರಾಮಚಂದ್ರಸ್ವಾಮಿಗೆ ಕುಂಭಾಭಿಷೇಕ, ಕಲ್ಯಾಣ ಮಹೋತ್ಸವ, ಮಹಾಸಾಮ್ರಾಜ್ಯ ಪಟ್ಟಾಭೀಷೇಕ ಮತ್ತು ಇತರ ಕಾರ್ಯಕ್ರಮಗಳು ಭಕ್ತರ ಸಹಾಯ ಸಹಕಾರದೊಂದಿಗೆ ಅತ್ತನೂರು ಕ್ಯಾಂಪು ಶ್ರೀ ರಾಮ ಸೇವಾ ಸಮಿತಿ ಭಕ್ತ ವೃಂದ ದಿಂದ ನೆರವೇರಿಸಲಾಯಿತು. ಸಾಮೂಹಿಕ ಸತ್ಯನಾರಾಯಣ ಪೂಜೆ, ಹೋಮ ಹವನ ಪೂಜೆ ಜರುಗಿದವು. ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ತೀರ್ಥ ಪ್ರಸಾದ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಪ್ರಧಾನ ಅರ್ಚಕರಾದ ಬಸ್ಸ ಯಲಿಂಗಯ್ಯ ಸ್ವಾಮಿ ಗುರುಮಠ, ಜಿ. ಸತ್ಯನಾರಾಯಣ, ಜಿ.ರ‍ಘುರಾವ್, ಸಿಹೆಚ್ ಶ್ರೀನಿವಾಸ್, ಸತ್ಯರಾಮಕುಮಾರ, ಪಿ.ಶ್ರೀನಿವಾಸ್, ಸಿಹೆಚ್ ರಾಮು, ಕೆ.ಸತ್ಯನಾರಾಯಣ, ಎಂ.ಶ್ರೀನಿವಾಸ, ಸಿಹೆಚ್ ಬ್ರಹ್ಮಾಜಿ, ಪಿ.ಸೂರಿಬಾಬು, ಈ. ಕಿರಣ, ಎನ್ ಅಜಯ ಕುಮಾರ, ಪಿ.ವೀರರಾಜು, ದೋರಚೌದ್ರಿ, ಎನ್.ರಾಮುದೋರಾ, ಸುರೇಶ ಸ್ವಾಮಿ, ಆಂಜನೇಯ್ಯ ಕ್ಯಾಂಪಿ, ನಿಲೋಗಲ್ ಕ್ಯಾಂಪ, ತೊಗಲಗುಡ್ಡ ಕ್ಯಾಂಪ್ ಮತ್ತು ಅತ್ತನೂರಿನ ಗ್ರಾಮಸ್ಥರು, ಶ್ರೀರಾಮ ಸೇವಾ ಸಮಿತಿ ಮತ್ತು ಭಕ್ತ ವೃಂದದವರು ಇದರು.

ಕದಂಬ ಫೌಂಡೇಶನ್ ಪಣಜಿ ಅವರಿಂದ ಬಸವರಾಜ ಮರಕಂದಿನ್ನಿ ಬಸವ ರಾಷ್ಟ್ರೀಯ ಪ್ರಶಸ್ತಿ

ಸಿರವಾರ.ಮೇ.20- ಬುದ್ದ ಬಸವ ಅಂಬೇಡ್ಕರ್ ಜಯಂತಿ ಆಚರಣೆ ಅಂಗವಾಗಿ ಕದಂಬ ಫೌಂಡೇಶನ್ ಪಣಜಿ ಅವರಿಂದ ಬಸವ ರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರ ನೀಡಲಾಗುತ್ತಿದ್ದೂ, ಕನ್ನಡ ಸೇನೆ ಕರ್ನಾಟಕ ರಾಯಚೂರು ಜಿಲ್ಲಾದ್ಯಕ್ಷರಾದ ಎಂ ಬಸವರಾಜ್ ಮರಕಂದಿನ್ನಿ ಅವರಿಗೆ ಸಮಾಜಸೇವೆಯಲ್ಲಿ ಅನುಪಮಾ ಹಾಗೂ ಸಾಮಾಜಿಕ ಸಂಘಟನೆ, ಹೋರಾಟ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಕ್ಕಾಗಿ ಬಸವ



ಪುರಸ್ಕಾರ ರಾಷ್ಟ್ರಮಟ್ಟದ ಪ್ರಶಸ್ತಿಯನ್ನು ಬಸವ ರಾಷ್ಟ್ರೀಯ ಪ್ರಶಸ್ತಿಯನ್ನು ಕದಂಬ ಫೌಂಡೇಶನ್ ಗೋವಾ ಪಣಜಿ ಹಾಗೂ ಸುವರ್ಣ ಫೋಕಸ್ ಪತ್ರಿಕೆಯ ವಾರ್ಷಿಕೋತ್ಸವದ ಅಂಗವಾಗಿ ಗೋವಾ ನಗರದ ಹೋಟೆಲ್ ಅಶೋಕ್ ಪ್ಲಾಜಾ ಗೋವಾದಲ್ಲಿ ದಿನಾಂಕ ಮೇ 24/05/2026 ಭಾನುವಾರ ರಂದು ಬೆಳಿಗ್ಗ 10 ಗಂಟೆಗೆ ಸಭಾಂಗಣದಲ್ಲಿ ನೀಡಿ ಗೌರವಿಸಲಾಗುವುದು ಎಂದು ಕದಂಬ ಫೌಂಡೇಶನ್ ಪಣಜಿ ಅದ್ಯಕ್ಷ ಬಾಳೇಶ್ ಉಪ್ಪಾರಹಟ್ಟಿ ಹಾಗೂ ಸುವರ್ಣ ಫೋಕಸ್ ಕನ್ನಡ ದಿನ ಪತ್ರಿಕೆ ಸಂಪಾದಕರಾದ ಆಲಂ ಘನಿ ತಿಳಿಸಿದ್ದಾರೆ.

15 ಸಾವಿರ ಶಿಕ್ಷಕರ ನೇಮಕ: ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲು ಸಿಎಂ ಸಿದ್ದರಾಮಯ್ಯ ಸೂಚನೆ

ಬೆಂಗಳೂರು: ಮುಂದಿನ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ 800 ಕರ್ನಾಟಕ ಪಬ್ಲಿಕ್ ಸ್ಕೂಲ್ (ಕೆಪಿಎಸ್)ತೆರೆಯುವ ಸಂಬಂಧ ಟೆಂಡರ್ ಪ್ರಕ್ರಿಯೆ ಶೀಘ್ರದಲ್ಲಿ ಆರಂಭಿಸಬೇಕು. ಜತೆಗೆ 15 ಸಾವಿರ ಶಿಕ್ಷಕರ ನೇಮಕ ಸಂಬಂಧ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಬುಧವಾರ ಇಲ್ಲಿನ ಸಿಎಂ ಗೃಹ ಕಚೇರಿ ಕೃಷ್ಣಾದಲ್ಲಿ ತಮ್ಮ ಅಧ್ಯಕ್ಷತೆ ನಡೆದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಭೆಯಲ್ಲಿ ಅಧಿಕಾರಿಗಳಿಗೆ ಮೇಲ್ಕಂಡ ಸೂಚನೆ ನೀಡಿದರು. ಜೂನ್ 1ಕ್ಕೆ ಕರ್ನಾಟಕ ಪಬ್ಲಿಕ್ ಸ್ಕೂಲ್ ಯೋಜನೆಗೆ ಶಿವಮೊಗ್ಗ ನಗರದಲ್ಲಿ ಚಾಲನೆ ನೀಡಲಾಗುವುದು. ಒಂದು ಕೆಪಿಎಸ್ ಶಾಲೆಯಲ್ಲಿ 1,200 ಮಂದಿ ಮಕ್ಕಳ ಪ್ರವೇಶಕ್ಕೆ ಅವಕಾಶ ಸಿಗಲಿದ್ದು, ಎಲ್‌ಕೆಜಿಯಿಂದ ಪಿಯುಸಿಯ ವರೆಗೆ ಒಂದೇ ಕಡೆ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಿಕ್ಷಣ ದೊರೆಯಲಿದೆ ಎಂದರು.



ಕರ್ನಾಟಕ ಪಬ್ಲಿಕ್ ಸ್ಕೂಲ್(ಕೆಪಿಎಸ್)ಗಳಿಗೆ ಮಕ್ಕಳನ್ನು ಕರೆತರಲು ಶಾಲಾ ಬಸ್ ವ್ಯವಸ್ಥೆ ಸೌಲಭ್ಯ ಕಲ್ಪಿಸುವ ಸಂಬಂಧ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು. ಅಲ್ಲದೆ, ಶಾಲಾ ಮಕ್ಕಳಿಗೆ ಉಚಿತವಾಗಿ ನೋಟ್ ಬುಕ್ ವಿತರಣೆ ಮಾಡುವ ಬಗ್ಗೆ ಪರಿಶೀಲನೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಫಲಿತಾಂಶ ಸುಧಾರಣೆ: ಈ ಬಾರಿ ಎಸೆಸೆಲ್ಸಿ ಯಲ್ಲಿ ಶೇ.94.10ರಷ್ಟು ಫಲಿತಾಂಶ ದಾಖಲಾಗಿದ್ದು, ಕಳೆದ ವರ್ಷಕ್ಕಿಂತ ಶೇ.14.06 ಹೆಚ್ಚಾಗಿದೆ. ಪಿಯುಸಿಯಲ್ಲಿ ಈ ಬಾರಿ ಶೇ.86.48ರಷ್ಟು ಹೆಚ್ಚಳವಾಗಿದ್ದು, ಕಳೆದ ವರ್ಷಕ್ಕಿಂತ ಶೇ.13ರಷ್ಟು ಹೆಚ್ಚಳವಾಗಿದೆ. ಎಸೆಸೆಲ್ಸಿ ಯಲ್ಲಿ ಈ ವರ್ಷ ಶೇ.100ರಷ್ಟು ಫಲಿತಾಂಶ ಪಡೆದ ಶಾಲೆಗಳ ಸಂಖ್ಯೆ 2,393 ಇದ್ದು ಕಳೆದ ವರ್ಷ 766 ಶಾಲೆಗಳು ಶೇ.100ರಷ್ಟು ಫಲಿತಾಂಶ ದಾಖಲಿಸಿದ್ದವು.

ಈ ಬಾರಿಯ ಎಸೆಸೆಲ್ಸಿ ಪರೀಕ್ಷೆಯಲ್ಲಿ ಎಸ್‌ಸಿ-ಎಸ್‌ಟಿ ವಿದ್ಯಾರ್ಥಿಗಳ ಫಲಿತಾಂಶ ಶೇ.18ರಷ್ಟು ಹೆಚ್ಚಳವಾಗಿದೆ. ಇದೇ ರೀತಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಫಲಿತಾಂಶ ಗಣನೀಯವಾಗಿ ಸುಧಾರಣೆಯಾಗಿದೆ. ಪ್ರವರ್ಗ-1 ಶೇ.16.6, 2 ಎ-ಶೇ.11.5, 2 ಬಿ- ಶೇ.18, 3ಎ-ಶೇ.8.12, 3ಬಿ-ಶೇ.10ರಷ್ಟು ಫಲಿತಾಂಶ ಸುಧಾರಣೆಯಾಗಿದೆ. ಕಲ್ಯಾಣ ಕರ್ನಾಟಕದಲ್ಲಿ ಭಾಗದಲ್ಲಿಯೂ ಫಲಿತಾಂಶ ಸುಧಾರಣೆಯಾಗಿದ್ದು, ಖಾಸಗಿ ಶಾಲೆಗಳಿಗೆ ಹೋಲಿಸಿದರೆ ಶೇ.2ರಷ್ಟು ಹೆಚ್ಚಾಗಿದೆ ಎಂದು ತಿಳಿಸಲಾಗಿದೆ.

ಎಸೆಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಫಲಿತಾಂಶ ಉತ್ತಮಪಡಿಸಲು ಅತಿಥಿ ಶಿಕ್ಷಕರನ್ನು ನೇಮಕ, ಪಠ್ಯ ಆಧಾರಿತ ಅಧ್ಯಯನ ಕ್ರಮವನ್ನು ರೂಪಿಸಲಾಗಿತ್ತು. ರಾಜ್ಯ ಮಟ್ಟದಲ್ಲಿ ಪೂರ್ವಭಾವಿ ಪರೀಕ್ಷೆಗಳನ್ನು ನಡೆಸಲಾಗಿತ್ತು. ಕಾಲ ಕಾಲಕ್ಕೆ ಶಿಕ್ಷಕರಿಗೆ ತರಬೇತಿ ನೀಡುವ ಮೂಲಕ ಮೇಲ್ವಿಚಾರಣೆ ಕೈಗೊಳ್ಳಲಾಗಿತ್ತು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಫಲಿತಾಂಶ ಉತ್ತಮಗೊಳ್ಳಲು ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಬೊಮ್ಮನಹಳ್ಳಿ ಶಿವರಾಜ ಮನೆಗೆ ಶ್ರೀದೇವಿ ಆರ್ ನಾಯಕ ಬೇಟಿ



ಅರಕೇರಾ,ಮೇ.20-

ಅರಕೇರಾ ತಾಲೂಕಿನ ಬೊಮ್ಮನಹಳ್ಳಿ ಗ್ರಾಮದ ಶಿವರಾಜ ಇವರ ಮನೆಗೆ ವಿದ್ಯುತ್ ಅವಘಡ ಜರುಗಿದ ಸುದ್ದಿ ತಿಳಿದು ಶಿವರಾಜ ಇವರ ನಿವಾಸಕ್ಕೆ ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀದೇವಿ ಆರ್ ನಾಯಕ ಬೇಟಿ ನೀಡಿ ಕುಟುಂಬಸ್ಥರಿಗೆ ಆಹಾರ ಧಾನ್ಯಗಳನ್ನು ನೀಡುವ ಮೂಲಕ ಧನ ಸಹಾಯ ನೀಡಿದರು.

ಸಂಬಂಧ ಪಟ್ಟ ಗ್ರಾಮ ಪಂಚಾಯತ ಅಭಿವೃದ್ದಿ ಅಧಿಕಾರಿಗಳಿಗೆ ಕೂಡಲೇ ಮನೆ ನಿರ್ಮಾಣ ಮಾಡಿಕೊಡುವಂತೆ ಹೇಳೀದರು. ಆ ಕುಟುಂಬದ ಮುಖ್ಯಸ್ಥರಿಗೆ ವಿವಿಧ ಮೂಲ ಸೌಕರ್ಯಗಳನ್ನು ಕೂಡಲೇ ಒದಗಿಸಿಕೊಡುವಂತೆ ಪಿಡಿಒ ಗಂಗಮ್ಮ ಕಂದಾಯ ನಿರೀಕ್ಷಕರಾದಕರಾದ ಅನಿಲಕುಮಾರ ಗ್ರಾಮಲೆಕ್ಕಾದಿಕಾರಿ ಕೆಂಚಬಸ್ಸಪ್ಪ ಇವರಿಗೆ ತಿಳಿಸಿದರು.

ಸಂದರ್ಭದಲ್ಲಿ ಶಿವರಾಜನಾಯಕ, ಹನುಮಂತ್ರಾಯ ನಾಯಕ, ಚಂಧ್ರು ಬೊಮ್ಮನಹಳ್ಳಿ, ಸಾಬಣ್ಣಹೂಗಾರ ಗಾಣದಾಳ ತಿಮ್ಮಣ್ಣಹೊಸೂರು, ಚನ್ನಬಸವನಾಯಕ, ಭೀಮಣ್ಣ ವೀರಗೋಟ್, ತಿಮ್ಮಣ್ಣ ಮುರಾಳ್, ಲಿಂಗಣ್ಣನಾಯಕ ಹವ

3 ನೇ ಪುಟಕ್ಕೆ



ನೂತನ ಜಿಲ್ಲಾಧಿಕಾರಿ ಪೂವಿತ ಕನ್ನಡ ಸೇನೆ ಕರ್ನಾಟಕ ಸನ್ಮಾನ

ಸಿರವಾರ.ಮೇ.20-

ರಾಯಚೂರು ಜಿಲ್ಲಾದಿಕಾರಿಯಾಗಿ ಅದಿಕಾರ ಸ್ವಿಕಾರ ಮಾಡಿಕೊಂಡಿರುವ ಪೂವಿತ ಎಸ್ ಇವರನ್ನು ಕನ್ನಡ ಸೇನೆ ಕರ್ನಾಟಕ ಸಂಘಟನೆಯ ಜಿಲ್ಲಾದ್ಯಕ್ಷರಾದ ಎಂ ಬಸವರಾಜ್ ಮರ್ಕಂದಿನ್ನಿ ನೇತೃತ್ವದಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಹನುಮೇಶ ನಾಯಕ್ ಜಿಲ್ಲಾ ಕಾರ್ಯಧ್ಯಕ್ಷರು, ಗೋವಿಂದ ಚೌಹಾಣ ಜಿಲ್ಲಾ ಉಪಾಧ್ಯಕ್ಷರು, ನಾಗನಗೌಡ ಪತ್ರಕರ್ತರು ಬಸವರಾಜ್ ಪೂಜಾರಿ, ನಿಸಾರ್ ಅಹ್ಮದ್, ಖಾಜಾ ಹುಸೇನ್ ಇನ್ನಿತರರು ಕನ್ನಡ ಸೇನೆ ಕರ್ನಾಟಕ ಜಿಲ್ಲಾ ಪದಾಧಿಕಾರಿಗಳು ಇದರು.

ಮಾರ್ಗಸೂಚಿ ಅನುಸರಿಸಿ ಇಂಧನ ವಿತರಿಸಲು ಕ್ರಮ: ಜಿಲ್ಲಾಧಿಕಾರಿ ಪೂವಿತಾ ಎಸ್

ರಾಯಚೂರು ಮೇ.20-

ಜಾಗತಿಕ ಸನ್ನಿವೇಶದ ಹಿನ್ನಲೆಯಲ್ಲಿ ಜಿಲ್ಲೆಯಲ್ಲಿ ಗ್ರಾಹಕರ ಹಿತದೃಷ್ಟಿಯಿಂದ ಇಂಧನದಲ್ಲಿ ಯಾವುದೇ ಕೊರತೆಯಾಗದಂತೆ ಮಾರ್ಗಸೂಚಿಗಳನ್ನು ಅನುಸರಿಸಿ ಇಂಧನವನ್ನು ವಿತರಿಸಲು ಕ್ರಮ ವಹಿಸಲಾಗಿದೆ ಎಂದು ಜಿಲ್ಲಾಧಿಕಾರಿ ಪೂವಿತಾ ಎಸ್. ಅವರು ತಿಳಿಸಿ ದ್ದಾರೆ. ಪೆಟ್ರೋಲಿಯಂ ನಿಯಮ- 2002ರ ನಮೂನೆ ಫಿಗಿರ ಷರತ್ತು 16(4)ರನ್ವಯ ಪೆಸೋ ಮಾರ್ಗ ಸೂಚಿ ಪ್ರಕಾರ ರಿಟೇಲ್ ಔಟ್ಲೆಟ್ ಗಳು ವಾಹನಗಳ ಟ್ಯಾಂಕ್‌ಗಳಿಗೆ ಅಥವಾ ಅಧಿಕೃತ ಕಂಟೇನರ್‌ಗಳಿಗೆ ಗರಿಷ್ಠ ಮಿತಿ 200 ಲೀಟರ್‌ಗಳಿಗೆ ಒಳಪಟ್ಟು ಮಾತ್ರ ಇಂಧನವನ್ನು ಪೂರೈಸುವುದು.

ರಿಟೇಲ್ ಔಟ್ಲೆಟ್‌ಗಳು ಬಲ್ಕ್ ಸಪ್ಲೈ



ಒಪೆರಷನ್ಸ್ ಗಳನ್ನು ನಡೆಸಲು ಅಧಿಕೃತ ಮಾರಾಟಗಾರರಾಗಿರು ವುದಿಲ್ಲ. ಬಲ್ಕ್ ಸಪ್ಲೈ ಒಪೆರಷನ್ಸ್ ವ್ಯಾಪಾರವನ್ನು ನಡೆಸಲು ವಿಶೇ ಷವಾಗಿ ಜಾರಿಯಲ್ಲಿರುವ ನೇರ ಮಾರಾಟ ಕಾರ್ಯವಿಧಾನಗಳ ಮೂಲಕ ಮಾತ್ರ ನಡೆಸತಕ್ಕದ್ದು. ಬಲ್ಕ್ ಸಪ್ಲೈ ಒಪೆರಷನ್ಸ್ ಗಳಲ್ಲಿ ಯಾವುದೇ ರೀತಿಯ ಅವ್ಯವಹಾರ ನಡೆದಲ್ಲಿ ನಿಯಮಗಳ ಉಲ್ಲಂಘ ನೆಯ ಜೊತೆಗೆ ಸುರಕ್ಷತೆ, ಲೈಸೆನ್ಸಿಂಗ್ ಮತ್ತು ಕಾರ್ಯಾಚರಣೆಯ ಬಗ್ಗೆ ಗಂಭೀರ ಪರಿಸ್ಥಿತಿ ನಿರ್ಮಾಣವಾ ಗುವ ಸಾಧ್ಯತೆ ಇರುತ್ತದೆ.

ಪೆಟ್ರೋಲ್ ಮತ್ತು ಡೀಸೆಲ್‌ನ್ನು ವಾಹನಗಳ ಟ್ಯಾಂಕ್‌ಗಳಿಗೆ ಮಾತ್ರ ಪೂರೈಸಬೇಕಾಗಿರುತ್ತದೆ. ಬಾಟಲ್‌ಗಳು, ಕ್ಯಾನ್‌ಗಳು ಮತ್ತು ಇನ್ನತರೇ ಯಾವುದೇ ಕಂಟೇನರ್ ಗಳಿಗೆ ಪೂರೈಸುವುದನ್ನು ನಿಷೇಧಿ ಸಲಾಗಿದೆ. ಬಲ್ಕ್ ಕನ್ಸೂಮರ್ಸ್‌ಗಳಿಗೆ ಡೀಸೆಲ್‌ನ್ನು ಕನ್ಸೂಮರ್ ಪಂಪ್ಸ್ ಅಧೀನದಲ್ಲಿ ಬರುವ ಡೈರೆಕ್ಟ್ ಸೇಲ್ಸ್ ಮೆಕ್ಯಾನಿಸ್ಮ್/ಡೆಪೊಟ್ಗಳ ಮೂಲಕ ಮಾತ್ರ ಮಾರಾಟ ಮಾಡುವುದು.

ಮೇಲೆ ವಿವರಿಸಿರುವ ಅಂಶ ಗಳಲ್ಲಿ ಉಲ್ಲಂಘನೆ ಕಂಡುಬದಲ್ಲಿ ಸಂಬಧಪಟ್ಟವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಾ ಗುವು ದು ಮತ್ತು ಇಂಧನದ ಅನಧೀಕೃತ ದಾಸ್ತಾನು ಇರಿಸುವುದು ಮತ್ತು ತಾತ್ಕಾಲಿಕ ಕೊರತೆ ಸೃಷ್ಟಿಸುವಂತಹ ಪ್ರಕರಣಗಳು ಕಂಡುಬಂದಲ್ಲಿ ಅಗತ್ಯ ವಸ್ತುಗಳ ಕಾಯ್ದೆ, 1955 ಮತ್ತು ಸಂಬಧಪಟ್ಟ ನಿಯಮಗಳಡಿ ಕಟ್ಟುನಿಟ್ಟಿನ ಕ್ರಮವಹಿಸಲಾಗು ವುದು. ಪೆಟ್ರೋಲ್ ಪಂಪ್‌ಗಳಲ್ಲಿ ಶಿಸ್ತು ಮತ್ತು ಸೌಹಾರ್ದಯುತ ನಡವಳಿಕೆಯನ್ನು ಕಾಪಾಡಿಕೊಳ್ಳಲು ಮತ್ತು ಪಂಪ್ ಸಿಬ್ಬಂದಿ ಹಾಗೂ ಸಹ ನಾಗರಿಕರೊಂದಿಗೆ ಮತ್ತು ಅಗತ್ಯ ಸೇವೆಗಳ ಸುಗಮ ಕಾರ್ಯ ನಿರ್ವಹಣೆಯಲ್ಲಿ ಎಲ್ಲಾ ಸಾರ್ವಜನಿಕರು ಸಹಕಾರ ನೀಡುವಂತೆ ಜಿಲ್ಲಾಧಿ ಕಾರಿಗಳು ಪ್ರಕಟಣೆಯಲ್ಲಿ ತಿಳಿಸಿ ದ್ದಾರೆ.

ಆಶ್ರಯ ಕಾಲೋನಿಯ ನಿವಾಸಿಗಳಿಗೆ ಹಕ್ಕುಪತ್ರ ನೀಡಲು ಒತ್ತಾಯ

ಸಿಪಿಐ(ಎಂಎಲ್) ರೆಡ್ ಸ್ಟಾರ್ ವತಿಯಿಂದ ಮಹಾನಗರ ಪಾಲಿಕೆಗೆ ಮನವಿ

ರಾಯಚೂರು,ಮೇ.20-

ನಗರದ ಚಂದ್ರಬಂಡ ರಸ್ತೆಯ ಆಶ್ರಯ ಕಾಲೋನಿಯಲ್ಲಿ ಕಳೆದ 25 ವರ್ಷಗಳಿಂದ ವಾಸಿಸುತ್ತಿರುವ ಕಡು ಬಡ ನಿವಾಸಿಗಳಿಗೆ ಹಕ್ಕುಪತ್ರ ಹಾಗೂ ಖುಲಾಸಿ ಪತ್ರ ನೀಡುವಂತೆ ಆಗ್ರಹಿಸಿ ಸಿಪಿಐ(ಎಂಎಲ್) ರೆಡ್ ಸ್ಟಾರ್ ರಾಯಚೂರು ತಾಲೂಕು ಸಮಿತಿಯು ಮಹಾನಗರ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿತು.

ಸಂಘಟನೆಯ ತಾಲೂಕು ಕಾರ್ಯದರ್ಶಿ ಕಾಮ್ರೆಡ್ ಮಣಿ ಮಾತನಾಡಿ, ಆಶ್ರಯ ಕಾಲೋನಿಯ ಯೋಜನೆ ಮೂಲತಃ ನಿರಾಶ್ರಿತ ಹಾಗೂ ಬಡವರಿಗೆ ಮನೆ ಮತ್ತು ನಿವೇಶನ ಒದಗಿಸುವ ಉದ್ದೇಶದಿಂದ ಜಾರಿಗೆ ಬಂದಿದ್ದರೂ, ಹಂಚಿಕೆ ಪ್ರಕ್ರಿಯೆಯಲ್ಲಿ ಭಾರೀ ಅಕ್ರಮ ನಡೆದಿದೆ ಎಂದು ಆರೋಪಿಸಿದರು.



ಶ್ರೀಮಂತರು, ಸರ್ಕಾರಿ ನೌಕರರು, ವಕೀಲರು, ವ್ಯಾಪಾರಸ್ಥರು ಹಾಗೂ ರಾಜಕೀಯ ಪ್ರಭಾವಿಗಳು ಹಕ್ಕುಪತ್ರ ಪಡೆದುಕೊಂಡಿದ್ದು, ಅವರು ಮನೆಗಳಲ್ಲಿ ವಾಸಿಸದೇ ಇರುವ ಹಿನ್ನೆಲೆಯಲ್ಲಿ ನಿಜವಾದ ಬಡ ನಿರಾಶ್ರಿತರು ಕಳೆದ 25 ವರ್ಷಗಳಿಂದ ಅಲ್ಲಿಯೇ ವಾಸಿಸುತ್ತಿದ್ದಾರೆ ಎಂದು ತಿಳಿಸಿದರು.

ಆಶ್ರಯ ಕಾಲೋನಿಯು ಸುಮಾರು 53 ಎಕರೆ ವಿಸ್ತೀರ್ಣ ಹೊಂದಿದ್ದು, ಶೇಕಡಾ 70ರಷ್ಟು ಪ್ರದೇಶದಲ್ಲಿ ಬಡ ಕುಟುಂಬಗಳು ನೆಲೆಸಿವೆ. ಈ ಕುರಿತು ಈ ಹಿಂದೆ ನಗರಸಭೆ ಹಾಗೂ ಸಂಘಟನೆಯ ಸಹಯೋಗದಲ್ಲಿ ಸಮೀಕ್ಷೆ ನಡೆಸಲಾಗಿದ್ದು, ಅದರ ವರದಿ ಮಹಾನಗರ ಪಾಲಿಕೆಯಲ್ಲಿ ಲಭ್ಯವಿದೆ ಎಂದರು.

ಸರ್ಕಾರದ ಆದೇಶಗಳು ಹಾಗೂ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಸೂಚನೆಗಳಂತೆ, ಆಶ್ರಯ ಕಾಲೋನಿಯಲ್ಲಿ ವಾಸಿಸದ ನಕಲಿ ಫಲಾನುಭವಿಗಳ ಹಕ್ಕುಪತ್ರ ರದ್ದುಪಡಿಸಿ, ವಾಸ್ತವವಾಗಿ ಅಲ್ಲೇ ವಾಸಿಸುತ್ತಿರುವ ಕಡು ಬಡ ಕುಟುಂಬಗಳಿಗೆ ಮನೆ ಹಾಗೂ ನಿವೇಶನಗಳ ಹಕ್ಕುಪತ್ರ ನೀಡಬೇಕು

3 ನೇ ಪುಟಕ್ಕೆ

ಡೆಂಗ್ಯೂ ನಿಯಂತ್ರಣ ಪ್ರತಿಯೊಬ್ಬರ ಜವಾಬ್ದಾರಿ: ಡಾ. ಟಿ.ಲಿಂಗರಾಜು



ಕೊಪ್ಪಳ ಮೇ 20-

ಡೆಂಗ್ಯೂ ನಿಯಂತ್ರಣ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಕೊಪ್ಪಳ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ಟಿ.ಲಿಂಗರಾಜು ಅವರು ಹೇಳಿದರು.

ರಾಷ್ಟ್ರೀಯ ಡೆಂಗ್ಯೂ ದಿನಾಚರಣೆ-2026ರ ಅಂಗವಾಗಿ ಕೊಪ್ಪಳ ಜಿಲ್ಲೆಯಲ್ಲಿ ಡೆಂಗ್ಯೂ ಜ್ವರದ ಹರಡುವಿಕೆ, ನಿಯಂತ್ರಣ ಹಾಗೂ ರೋಗಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಜನಸಮುದಾಯವನ್ನು ಜಾಗೃತಿಗೊಳಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಇತ್ತೀಚೆಗೆ ಕೊಪ್ಪಳ ನಗರದ ಹಳೆ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಹಮ್ಮಿಕೊಂಡಿದ್ದ ಡೆಂಗ್ಯೂ ಜಾಗೃತಿಯ ಜಾಥಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಭಾರತ ಘನ ಸರ್ಕಾರದ ಆರೋಗ್ಯ ಸಚಿವಾಲಯದ ನಿರ್ದೇಶನದ ಮೇರೆಗೆ ಪ್ರತಿವರ್ಷದ ಮೇ-16 ಅನ್ನು ಜಿಲ್ಲೆಯಾದ್ಯಂತ ರಾಷ್ಟ್ರೀಯ ಡೆಂಗ್ಯೂ ದಿನಾಚರಣೆಯನ್ನಾಗಿ ಆಚರಿಸಿ ಡೆಂಗ್ಯೂ ರೋಗ ಪ್ರಸರಣ ಅವಧಿಯ ಮುನ್ನವೇ ಜನಸಮುದಾಯವನ್ನು ಜಾಗೃತಿಗೊಳಿಸಲು ವ್ಯಾಪಕ ಅಭಿಯಾನ, ಜಾಥಗಳು, ರ್‍ಯಾಲಿ, ಅಂತರ್ ಇಲಾಖಾ ಸಭೆ ಸಮಾರಂಭಗಳನ್ನು ಜಿಲ್ಲೆಯಾಧ್ಯಂತ ನಡೆಸಲಾಗುತ್ತಿದೆ. ಜಿಲ್ಲೆಯಲ್ಲಿ ಡೆಂಗ್ಯೂ ನಿಯಂತ್ರಣ ಪ್ರತಿಯೊಬ್ಬರ ಸಹಕರಿಸಬೇಕು ಎಂದರು.

ಡೆಂಗ್ಯೂ ನಿಯಂತ್ರಣಕ್ಕೆ ಆರೋಗ್ಯ ಇಲಾಖೆಯಿಂದ ಎಲ್ಲಾ ಸೂಕ್ತ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗಿದೆ. ಡೆಂಗ್ಯೂ-ಚಿಕೂನ್‌ಗುನ್ಯಾ ಜ್ವರಗಳಿಗೆ ಯಾವುದೇ ನಿರ್ಧಿಷ್ಟ ಚಿಕಿತ್ಸೆ ಅಥವಾ ಲಸಿಕೆಯಾಗಲಿ ಪ್ರಸ್ತುತ ಲಭ್ಯವಿಲ್ಲದಿದ್ದರೂ ಸಹ ಜನರೂ ಭಯಪಡುವ ಅವಶ್ಯಕತೆ ಇಲ್ಲ. ಡೆಂಗ್ಯೂ-ಚಿಕೂನ್‌ಗುನ್ಯಾ

ಜ್ವರಗಳ ಲಕ್ಷಣಗಳನ್ನಾಧರಿಸಿ ಸೂಕ್ತ ಚಿಕಿತ್ಸೆ ನೀಡಲಾಗುವುದು. ಯಾವುದೇ ಜ್ವರ ಕಾಣಿಸಿಕೊಂಡರೇ ಜನಸಮುದಾಯ ಶೀಘ್ರವೇ ಹತ್ತಿರದ ಸರ್ಕಾರಿ ಆರೋಗ್ಯ ಕೇಂದ್ರಗಳಿಗೆ ತೆರಳಿ ಪರೀಕ್ಷೆ ಮಾಡಿಸಿಕೊಂಡು ಸೂಕ್ತ ಚಿಕಿತ್ಸೆ ಪಡೆಯಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ಸೂಕ್ತ ಚಿಕಿತ್ಸೆ ಮತ್ತು ಉಚಿತ ಪ್ರಯೋಗಾಲಯ ಪರೀಕ್ಷೆಗಳನ್ನು ಮಾಡಲಾಗುತ್ತಿದ್ದು, ಜನರು ಅನಗತ್ಯ ಭಯಕ್ಕೆ ಒಳಗಾಗದೆ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದು ಎಂದು ಹೇಳಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿಗಳಾದ ಡಾ. ಎಚ್.ನಂದಕುಮಾರ್ ಅವರು ಮಾತನಾಡಿ, ಡೆಂಗ್ಯೂ ಜ್ವರವು ವೈರಸ್ ಕಾಯಿಲೆಯಾಗಿದ್ದು, ಇದು ಈಡಿಸ್ ಜಾತಿಯ ಸೊಳ್ಳೆಗಳ ಕಚ್ಚುವಿಕೆಯಿಂದ ಹರಡುತ್ತದೆ. ಈ ಸೊಳ್ಳೆಗಳು ಬಹುತೇಕ ಹಗಲು ಹೊತ್ತಿನಲ್ಲಿಯೇ ಕಚ್ಚುತ್ತವೆ. ಈಡಿಸ್ ಸೊಳ್ಳೆಗಳು ನೀರು ಶೇಖರಣೆ ಸಲಕರಣೆಗಳಲ್ಲಿ ಶುದ್ದ ನೀರಿನಲ್ಲಿಯೇ ಸಂತಾನಾಭಿವೃದ್ಧಿ ಮಾಡುತ್ತವೆ. ಹಾಗಾಗಿ ನೀರು ಶೇಖರಣೆ ಸಲಕರಣೆಗಳನ್ನು ಸದಾಕಾಲ ಮುಚ್ಚಿಡಬೇಕು. ಇದರ ಜೊತೆಗೆ ಮನೆಯ ಒಳಾಂಗಣ ಮತ್ತು ಹೊರಾಂಗಣದಲ್ಲಿ ನೀರು ನಿಲ್ಲದಂತೆ ಎಚ್ಚರವಹಿಸಿ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಬೇಕೆಂದರು.

ಈಡೀಸ್ ಲಾರ್ವಾ ಸಮೀಕ್ಷೆಗಾಗಿ ಮನೆಗೆ ಬೇಟಿ ನೀಡುವ ಆರೋಗ್ಯ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತರಿಗೆ ಜನರು ಸಹಕಾರ ನೀಡಿ ಅವರ ಸಲಹೆಗಳನ್ನು ಪಾಲಿಸಬೇಕು. ಈ ವರ್ಷದ ಧ್ಯೇಯವಾಕ್ಯ ಡೆಂಗ್ಯೂ ನಿಯಂತ್ರಣಕ್ಕಾಗಿ ಸಮುದಾಯದ ಸಹಭಾಗಿತ್ವ ಪರಿಶೀಲಿಸಿ, ಸ್ವಚ್ಛಗೊಳಿಸಿ ಹಾಗೂ ಮುಚ್ಚಿಡಿ ಎಂಬುದಾಗಿದೆ ಎಂದು ಹೇಳಿದರು.

ಜಿಲ್ಲಾ ವಿ.ಬಿ.ಡಿ ನಿಯಂತ್ರಣಾಧಿಕಾರಿಗಳಾದ ಡಾ. ಕುಮಾರಸ್ವಾಮಿ ಗೋನಾಳ್ ಅವರು ಮಾತನಾಡಿ, ಪ್ರಸ್ತುತ ಪೂರ್ವ ಮುಂಗಾರು ಮಳೆಗಾಲ ಪ್ರಾರಂಭವಾಗಿದ್ದು, ಅಲ್ಲಲ್ಲಿ ನಿಂತ ನೀರಿನ ತಾಣಗಳು ಉತ್ಪತ್ತಿಯಾಗುತ್ತವೆ ಹಾಗೂ ನೀರಿನ ಶೇಖರಣಾ ಸಲಕರಣೆಗಳಲ್ಲಿ ನೀರು ಶೇಖರಣೆಯಾಗಿ ಸೊಳ್ಳೆ ಉತ್ಪತ್ತಿಯಾಗಿ ಸೊಳ್ಳೆಗಳ ಸಾಂದ್ರತೆ ಹೆಚ್ಚಾಗುತ್ತದೆ. ಕಾರಣ, ಸೊಳ್ಳೆಗಳಿಂದ ಹರಡುವ ರೋಗಗಳಾದ ಡೆಂಗ್ಯೂ, ಚಿಕೂನ್‌ಗುನ್ಯಾ ಹಾಗೂ ಮಲೇರಿಯಾದಂತಹ ಕಾಯಿಲೆಗಳು ಹೆಚ್ಚಾಗುವ ಸಂಭವವಿರುತ್ತದೆ. ಅದರಲ್ಲೂ ಡೆಂಗ್ಯೂ-ಚಿಕೂನ್‌ಗುನ್ಯಾ ಹರಡುವ ಈಡಿಸ್ ಸೊಳ್ಳೆಗಳು ಮನೆಯ ಒಳಗಡೆ ಕಚ್ಚುವುದರಿಂದ ಡೆಂಗ್ಯೂ-ಚಿಕೂನ್‌ಗುನ್ಯಾ ಜ್ವರಗಳು ಹರಡುವ ಸಾದ್ಯತೆ ಇರುತ್ತದೆ. ಕಾರಣ ಯಾವುದೇ ಜ್ವರವಿರಲಿ ಶೀಘ್ರವೇ ಹತ್ತಿರದ ಸರ್ಕಾರಿ ಆರೋಗ್ಯ ಕೇಂದ್ರದಲ್ಲಿ ರಕ್ತ ಪರೀಕ್ಷೆ ಮಾಡಿಸಿ, ಉಚಿತ ಚಿಕಿತ್ಸೆ ಪಡೆಯಬೇಕು. ಹಾಗೂ ಮಲಗುವಾಗ ಸೊಳ್ಳೆ ಪರದೆಗಳನ್ನು ಬಳಕೆಮಾಡಿ. ವಾರಕ್ಕೊಮ್ಮೆ ನೀರು ಶೇಖರಣ ಸಲಕರಣೆಗಳನ್ನು ಖಾಲಿಮಾಡಿ ಸ್ವಚ್ಛಗೊಳಿಸಿ ನೀರು ತುಂಬಿ ಮುಚ್ಚಿಡಬೇಕು. ಸೊಳ್ಳೆ ಕಡಿತದಿಂದ ದೂರವಿರಲು ಸಾದ್ಯವಾದ ಎಲ್ಲಾ ಸ್ವಯಂ ರಕ್ಷಣ ವಿಧಾನಗಳನ್ನು ಅನುಸರಿಸಿ. ಡೆಂಗ್ಯೂ ಜ್ವರ ನಿಯಂತ್ರಣಕ್ಕೆ ಜನಸಮುದಾಯದ ಸಹಕಾರ, ಸೊಳ್ಳೆ ಉತ್ಪತ್ತಿ ತಾಣಗಳ ನಿರ್ಮೂಲನೆ ಹಾಗೂ ಜನಜಾಗೃತಿಯೊಂದೆ ಪರಿಹಾರ ಮಾರ್ಗ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕುಷ್ಟರೋಗ ನಿಯಂತ್ರಣಾಧಿಕಾರಿಗಳಾದ ಡಾ. ಪ್ರಕಾಶ್ ಎಚ್.ಎಸ್., ಕೊಪ್ಪಳ ತಾಲೂಕ ಆರೋಗ್ಯಾಧಿಕಾರಿಗಳಾದ ಡಾ. ರಾಮಾಂಜನೇಯಾ ಹಾಗೂ ಜಿಲ್ಲಾ ತಾಲೂಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ವ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶಿವಾನಂದ ಪೂಜಾರ ಅವರು ಸ್ವಾಗತಿಸಿ, ಕಾರ್ಯಕ್ರಮವನ್ನು ನಿರೂಪಿಸಿದರು ಹಾಗೂ ರಾಷ್ಟ್ರೀಯ ಡೆಂಗ್ಯೂ ದಿನಾಚರಣೆಯ ಮಹತ್ವ, ಜನಸಮುದಾಯ ಅನುಸರಿಸಬೇಕಾದ ನಿಯಂತ್ರಣ ಕ್ರಮಗಳನ್ನು ವಿವರಿಸಿದರು.

ಸಾರ್ವಜನಿಕರಿಗೆ ಅರಿವು: ನಗರದ ಆಶೋಕ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಜನಸಮುದಾಯ ಹಾಗೂ ಸಿಬ್ಬಂದಿಗೆ ಸೊಳ್ಳೆಗಳಿಂದ ಹರಡುವ ರೋಗಗಳ ಬಗ್ಗೆ ಅರಿವು ಮೂಡಿಸಲಾಯಿತು.

ಕೊಪ್ಪಳ ನಗರದಾದ್ಯಂತ ಸಂಚರಿಸಿದ ಡೆಂಗ್ಯೂ ಜಾಗೃತಿ ಜಾಥಾವು ಸಂದೇಶ ಹಾಗೂ ಜಾನಪದ ಗೀತೆಗಳನ್ನು ಬಿತ್ತರಿಸಲಾಯಿತು ಹಾಗೂ ಡೆಂಗ್ಯೂ ಜಾಗೃತಿ ಗೀತೆಗಳನ್ನು ಹಾಡುವುದರ ಮೂಲಕ, ಡೆಂಗ್ಯೂ ಜಾಗೃತಿ ಕರಪತ್ರಗಳನ್ನು ಹಂಚುವುದರ ಮೂಲಕ ಮತ್ತು ಬಿತ್ತಿಪತ್ರಗಳನ್ನು ಪ್ರದರ್ಶಿಸುವುದರ ಮೂಲಕ ನಗರದಲ್ಲಿ ಡೆಂಗ್ಯೂ ಜನ ಜಾಗೃತಿ ಮೂಡಿಸಲಾಯಿತು. ಕೊಪ್ಪಳ ಬಸ್ ಡೀಪೋ ಹಾಗೂ ಕಾರ್ಯಗಾರಗಳಲ್ಲಿ ವಿಶೇಷ ಲಾರ್ವಾಸಮೀಕ್ಷೆ ನಡೆಸಿ ಸರ್ವಸಿಬ್ಬಂದಿಗೆ ಡೆಂಗ್ಯೂ-ಚಿಕೂನ್‌ಗುನ್ಯಾ ಕುರಿತು ಅರಿವು ಮೂಡಿಸಲಾಯಿತು.



ಕಲಬುರಗಿ ರೈತರಿಗೆ 7 ಗಂಟೆ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ಪ್ರತಿಭಟನೆ

ಅಫಜಲಪುರ,ಮೇ.20-

ಕಲಬುರಗಿಯ ಅಫಜಲಪುರ ತಾಲೂಕಿನ ರೈತರಿಗೆ ಹಗಲು ವೇಳೆ ನಿರಂತರವಾಗಿ 7 ಗಂಟೆಗಳ ಕಾಲ ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡಬೇಕೆಂದು ಆಗ್ರಹಿಸಿ ತಾಲೂಕು ಸ್ವಾಭಿಮಾನಿ ಕಬ್ಬು ಬೆಳೆಗಾರರ ಐಕ್ಯ ಹೋರಾಟ ಸಮಿತಿ ಹಾಗೂ ಕರ್ನಾಟಕ ಕಬ್ಬು ಬೆಳೆಗಾರರ ಸಂಘ ಪದಾಧಿಕಾರಿಗಳು ಪಟ್ಟಣದ ಜೆಸ್ಕಾಂ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ನೂರಾರು ರೈತರು ಪ್ರತಿಭಟನೆಯಲ್ಲಿ ಭಾಗವಹಿಸಿ ಜೆಸ್ಕಾಂ ಇಲಾಖೆಯ ಅಧಿಕಾರಿ ನಾಗರಾಜ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಈ ವೇಳೆ ಮಾತನಾಡಿದ ರೈತ ಮುಖಂಡರು, ''ಅಫಜಲಪುರ ತಾಲೂಕು ಹಲವು ವರ್ಷಗಳಿಂದ ಬರಗಾಲದ ಸಂಕಷ್ಟ ಅನುಭವಿಸುತ್ತಿದೆ. ರೈತರು ಭೀಮಾ ನದಿ ಹಾಗೂ ಬೋರ್‌ವೆಲ್‌ಗಳ ಮೂಲಕ ನೀರಾವರಿ ಮಾಡಿಕೊಂಡು ಕಬ್ಬು, ಹತ್ತಿ, ಬಾಳೆ ಸೇರಿದಂತೆ ವಿವಿಧ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಆದರೆ ಸಮರ್ಪಕ ವಿದ್ಯುತ್ ಪೂರೈಕೆ ಇಲ್ಲದಿರುವುದರಿಂದ ಕೃಷಿ ಚಟುವಟಿಕೆಗಳಿಗೆ ತೀವ್ರ ತೊಂದರೆಯಾಗುತ್ತಿದೆ'' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿ ಎರಡು ಗಂಟೆಗೊಮ್ಮೆ ವಿದ್ಯುತ್ ಟ್ರಿಪ್ ಆಗುತ್ತಿರುವುದರಿಂದ ಬೆಳೆಗಳಿಗೆ ಸಮರ್ಪಕವಾಗಿ ನೀರು ಹರಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ರೈತರು ಆರ್ಥಿಕ ನಷ್ಟ ಅನುಭವಿಸುತ್ತಿದ್ದು, ತಕ್ಷಣವೇ ಹಗಲು ವೇಳೆ ನಿರಂತರ 7 ಗಂಟೆಗಳ ಕಾಲ ವಿದ್ಯುತ್ ಪೂರೈಕೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರೈತ ಹೋರಾಟಗಾರ ಶ್ರೀಮಂತ ಬಿರಾದಾರ, ರೈತ ಮುಖಂಡರಾದ ಗುರು ಚಾಂದಕವಟೆ, ರಮೇಶ ಶೆಟ್ಟಿ, ರಮೇಶ ಪಾಟೀಲ, ಲತೀಫ್ ಬೋಗನಳ್ಳಿ, ಶಿವಶಂಕರ ಪಾಟೀಲ, ಅರ್ಜುನ ಸೋಮಜಾಳ, ರಾಜಕುಮಾರ ಬಡದಾಳ, ಭೀಮಾಶ್ಯಾ ವಡಗೇರ, ಶರಣ ಪ್ರಸಾದ ನೂಲಾ, ಅಣ್ಣಾರಾಯ ಪಾಟೀಲ, ಧಾನು ನೂಲ, ಮಹಾಂತಗೌಡ ಪಾಟೀಲ, ಶರಣು ದಿವಾಣಜಿ, ವಿಠಲ ಪೂಜಾರಿ, ಯಶವಂತ ಪಟ್ಟೇದಾರ್, ಮಲ್ಲಿಕಾರ್ಜುನ್ ಪಾಟೀಲ್, ಅಣ್ಣಾರಾಯಗೌಡ್ ಪಾಟೀಲ್, ಬಸವರಾಜ್ ಪಾಟೀಲ್, ಸುರೇಶ್ ಗೌಡ ಪಾಟೀಲ್, ಸಂಗಣ್ಣ ನಾರಸೆರ, ಅಡೆಪ್ಪ ಹೂಗಾರ್ ಸೇರಿದಂತೆ ಅನೇಕ ರೈತರು ಭಾಗವಹಿಸಿದ್ದರು.

ಕೊಪ್ಪಳ ಜಿಲ್ಲೆಯಲ್ಲಿ ರಸಗೊಬ್ಬರ ವಿತರಣೆ ಸಮರ್ಪಕವಾಗಿ ನಡೆಯಲಿ: ಜಿಲ್ಲಾಧಿಕಾರಿ



ಕೊಪ್ಪಳ ಮೇ 20-

ರೈತರಿಗೆ ಅನುಕೂಲವಾಗುವಂತೆ ಕೊಪ್ಪಳ ಜಿಲ್ಲೆಯಲ್ಲಿ ರಸಗೊಬ್ಬರ ವಿತರಣೆ ಪ್ರಕ್ರಿಯೆಯನ್ನು ಕೂಡಲೇ ಆರಂಭಿಸಿ, ಅಚ್ಚುಕಟ್ಟಾಗಿ ನಿರ್ವಹಣೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಬಿ ಇಟ್ನಾಳ ಅವರು ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ವಿತರಕರಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಮೇ 19ರಂದು, ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರು, ಉಪ ನಿರ್ದೇಶಕರು, ಕೊಪ್ಪಳ, ಗಂಗಾವತಿ, ಕುಷ್ಟಗಿ, ಯಲಬುರ್ಗಾ, ಕಾರಟಗಿ, ಕುಕನೂರ, ಕನಕಗಿರಿ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರು, ಮಾರ್ಕೆಟಿಂಗ್ ಅಧಿಕಾರಿಗಳು, ರಸಗೊಬ್ಬರ ವಿತರಕ ಸಂಘದ ಅಧ್ಯಕ್ಷರು ಮತ್ತು ಕೃಷಿ ಇಲಾಖೆಯ ಇನ್ನಿತರ ಅಧಿಕಾರಿಗಳೊಂದಿಗೆ ಗೂಗಲ್ ಮೀಟ್ ನಡೆಸಿ ಅವರು ಮಾತನಾಡಿದರು.

ಕೊಪ್ಪಳ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಮಳೆಗಳು ವಾಡಿಕೆಗಿಂತ ಮುನ್ನವೇ ಆರಂಭವಾಗಿವೆ. ಜಿಲ್ಲೆಯಲ್ಲಿ ಈಗಾಗಲೇ ಎರಡ್ಮೂರು ಬಾರಿ ಬಿರುಸಿನ ಮಳೆ ಬಿದ್ದಿರುವುದರಿಂದ ರೈತ ಸಮುದಾಯದಿಂದ ಬಿತ್ತನೆ ಕಾರ್ಯಗಳು ಚುರುಕುಗೊಂಡಿವೆ. ಆದ್ದರಿಂದ ನೀರಾವರಿ ಆಶ್ರಿತ ರೈತರು ಸೇರಿದಂತೆ ಬಿತ್ತನೆ ಕಾರ್ಯ ಆರಂಭಿಸುವ ಎಲ್ಲ ರೈತರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದತೆ ಜಿಲ್ಲಾದ್ಯಂತ ರಸಗೊಬ್ಬರ ವಿತರಣೆ ಕಾರ್ಯವು ಶಿಸ್ತುಬದ್ಧವಾಗಿ ನಡೆಯಬೇಕು.

ಜಿಲ್ಲೆಯ ಪ್ರತಿಯೊಬ್ಬ ರೈತರಿಗೆ ಅನುಕೂಲವಾಗುವಂತೆ ಗೊಬ್ಬರ ವಿತರಣೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು. ಯಾವುದೇ ಕಾರಣಕ್ಕೂ ದುರುಪಯೋಗವಾಗಬಾರದು. ಜಿಲ್ಲೆಯಲ್ಲಿ ಯೂರಿಯಾ ಗೊಬ್ಬರಕ್ಕೆ ಯಾವುದೇ ರೀತಿಯ ಕೊರತೆ ಇಲ್ಲ. ಇಂದು ರಸಗೊಬ್ಬರ ಸಿಗದಿದ್ದರೂ ನಾಳೆಯಾದರು ತಪ್ಪದೇ ಲಭ್ಯವಾಗುತ್ತದೆ ಎಂಬ ಮಾಹಿತಿಯನ್ನು ರೈತರಿಗೆ ನೀಡಬೇಕು. ರಸಗೊಬ್ಬರ ಸಿಗುವುದಿಲ್ಲ ಎಂದು ಯಾವುದೇ ಭಾಗದ ರೈತರು ಆತಂಕಕ್ಕೆ ಒಳಗಾಗಬಾರದು. ಆದ್ದರಿಂದ ರಸಗೊಬ್ಬರದ ಅವಶ್ಯಕತೆ ಇರುವ ಎಲ್ಲ ರೈತರಿಗೂ ರಸಗೊಬ್ಬರವು ಸಕಾಲಕ್ಕೆ ಲಭ್ಯವಾಗುವಂತೆ ಸೂಕ್ತ ಮೇಲ್ವಿಚಾರಣೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

2026-27ನೇ ಸಾಲಿನ ಮುಂಗಾರು ಹಂಗಾಮಿನ ಅವಧಿ ಏಪ್ರೀಲ್ 2026ರಿಂದ ಸೆಪ್ಟೆಂಬರ್‌ರವರೆಗೆ ಕೊಪ್ಪಳ ಜಿಲ್ಲೆಯಲ್ಲಿ ಯೂರಿಯಾ ರಸಗೊಬ್ಬರಕ್ಕೆ 49,451 ಮೆಟ್ರಿಕ್ ಟನ್, ಡಿಎಪಿಗೆ 17,817 ಮೆಟ್ರಿಕ್ ಟನ್, ಎಂಒಪಿಗೆ 5758 ಮೆಟ್ರಿಕ್ ಟನ್, ಕಾಂಪ್ಲೆಕ್ಸ್ ಗೆ 43,446 ಮೆಟ್ರಿಕ್ ಟನ್ ಮತ್ತು ಎಸ್ ಎಸ್‌ಪಿಗೆ 1231 ಮೆಟ್ರಿಕ್ ಟನ್ ಬೇಡಿಕೆ ಇದೆ. ಮೇ 19ರವರೆಗೆ ಜಿಲ್ಲೆಯಲ್ಲಿ 12,041 ಮೆಟ್ರಿಕ್ ಟನ್ ಯೂರಿಯಾ, 5795 ಮೆಟ್ರಿಕ್ ಟನ್ ಡಿಎಪಿ, 1014 ಮೆಟ್ರಿಕ್ ಟನ್, ಎಂಒಪಿ, 18269 ಮೆಟ್ರಿಕ್ ಟನ್ ಕಾಂಪ್ಲೆಕ್ಸ್, 535 ಮೆಟ್ರಿಕ್ ಟನ್ ಎಸ್‌ಎಸ್‌ಪಿ ದಾಸ್ತಾನು ಇದೆ ಎಂದು ಕೊಪ್ಪಳ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು. ಮೇ 20ನೇ ತಾರೀಖಿನಿಂದಲೇ ಕೊಪ್ಪಳ ಜಿಲ್ಲೆಯಲ್ಲಿ ರಸಗೊಬ್ಬರ ವಿತರಣೆ ಪ್ರಕ್ರಿಯೆಯನ್ನು ಆರಂಭಿಸಲು ಅಗತ್ಯ ಕ್ರಮ ವಹಿಸುವುದಾಗಿ ಅವರು ತಿಳಿಸಿದರು.

ಗೂಗಲ್ ಮೀಟನಲ್ಲಿ ಜಂಟಿ ಕೃಷಿ ನಿರ್ದೇಶಕರು, ಉಪ ನಿರ್ದೇಶಕರು, ಕೊಪ್ಪಳ, ಗಂಗಾವತಿ, ಕುಷ್ಟಗಿ, ಯಲಬುರ್ಗಾ, ಕಾರಟಗಿ, ಕುಕನೂರ ಹಾಗೂ ಕನಕಗಿರಿ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರು, ಮಾರ್ಕೆಟಿಂಗ್ ಅಧಿಕಾರಿಗಳು, ರಸಗೊಬ್ಬರ ವಿತರಕ ಸಂಘದ ಅಧ್ಯಕ್ಷರು ಮತ್ತು ಕೃಷಿ ಇಲಾಖೆಯ ಇನ್ನಿತರ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

ಕೆಕೆಆರ್ ಡಿಬಿ ಮಂಡಳಿ ಸಭೆ: 5,000 ಕೋಟಿ ರೂ. ಮೊತ್ತದ ಕ್ರಿಯಾ ಯೋಜನೆ ರೂಪಿಸಲು ಸಭೆಯಲ್ಲಿ ಒಪ್ಪಿಗೆ



ಕಲಬುರಗಿ,ಮೇ.20-

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ 2026-27ನೇ ಆರ್ಥಿಕ ಸಾಲಿಗೆ ರಾಜ್ಯ ಸರ್ಕಾರದಿಂದ ಹಂಚಿಕೆಯಾದ 5,000 ಕೋಟಿ ರೂ. ಮೊತ್ತದ ಅನುದಾನಕ್ಕೆ ಕ್ರಿಯಾ ಯೋಜನೆ ರೂಪಿಸಲು ಸೋಮವಾರ ನಡೆದ ಮಂಡಳಿ ಸಭೆಯಲ್ಲಿ ಸರ್ವಾನುಮತದ ನಿರ್ಣಯ ಕೈಗೊಂಡಿದೆ.

ಮೈಕ್ರೋ ಮತ್ತು ಮ್ಯಾಕ್ರೊ ನಿಧಿಗೆ 2,900 ಕೋಟಿ ರೂ.ಕಾಯ್ದಿರಿಸಿದ್ದು, ಇದರಲ್ಲಿ ಮೈಕ್ರೋಗೆ ಶೇ.70 ಮತ್ತು ಮ್ಯಾಕ್ರೋಗೆ ಶೇ.30 ಅನುದಾನ ಬಳಸಿಕೊಳ್ಳಲು ನಿರ್ಧರಿಸಿದೆ. ಅಲ್ಲದೆ ಬಜೆಟ್ ನಲ್ಲಿ ಘೋಷಿಸುವ ಯೋಜನೆಗಳಿಗೆ 1500 ಕೋಟಿ ರೂ., ಉನ್ನತ ಶಿಕ್ಷಣ ಮತ್ತು ವಿಶ್ವವಿದ್ಯಾನಿಲಯಕ್ಕೆ 100 ಕೋಟಿ ರೂ., ಪ್ರಾದೇಶಿಕ ನಿಧಿ ಒಳಗೊಂಡಂತೆ ಸಿ.ಎಂ, ಮಂಡಳಿ ಅಧ್ಯಕ್ಷರು, ಸರ್ಕಾರದ ವಿವೇಚನಾ ನಿಧಿಗೆ 450 ಕೋಟಿ ರೂ. ಹಾಗೂ ಆಡಳಿತಾತ್ಮಕ ವೆಚ್ಚಕ್ಕೆ 50 ಕೋಟಿ ರೂ. ಅನುದಾನ ಬಳಕೆಗೆ ಒಮ್ಮತದ ನಿರ್ಣಯ ಕೈಗೊಂಡಿದೆ. ಮೈಕ್ರೊ ಯೋಜನೆಯಡಿ ಸಾಂಸ್ಥಿಕ ವಲಯ ಅಭಿವೃದ್ದಿಗೆ ಮೀಸಲಾದ ಅನುದಾನದಲ್ಲಿ ಅಕ್ಷರ ಅವಿಷ್ಕಾರಕ್ಕೆ 25% ಇತರೆ ಸಾಂಸ್ಥಿಕ ವಲಯಕ್ಕೆ 15% ಹಾಗೂ ಮೂಲಭೂತ ಸೌಲಭ್ಯ ಕಾರ್ಯಕ್ಕೆ ಶೇ.60 ರಷ್ಟು ಅನುದಾನ ನಿಗದಿ ಮಾಡಲಾಗಿದೆ. ಅದೇ ರೀತಿ ಇದೇ ಮೊದಲ ಬಾರಿಗೆ ಆಯವ್ಯಯದಲ್ಲಿ ಘೋಷಿಸಿದಂತೆ ಮ್ಯಾಕ್ರೋ ಯೋಜನೆ ಅನುದಾನದಡಿ ಶೇ.40ರಷ್ಟು ಅನುದಾನ ಆರೋಗ್ಯ, ಶಿಕ್ಷಣ, ಹಾಗೂ ಅಪೌಷ್ಟಿಕತೆ ನಿವಾರಣೆಗೆ ಮೀಸಲಿರಿಸಲು ಸಭೆ ಒಪ್ಪಿಗೆ ಸೂಚಿಸಿದೆ. ಬೀದರ್-ಬೆಂಗಳೂರು ಆರ್ಥಿಕ ಕಾರಿಡಾರ್ ಆಗಿ ಪರಿವರ್ತನೆಗೆ 4 ಪಥದ 400 ಕಿ.ಮೀ ರಸ್ತೆ ಅಭಿವೃದ್ಧಿಪಡಿಸಲು 8,200 ಕೋಟಿ ರೂ. ಅನುದಾನ ಅವಶ್ಯಕತೆ ಇದ್ದು, ಇದನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ಭರಿಸಿ ಅಭಿವೃದ್ಧಿಪಡಿಸಲು ಮತ್ತು ರಾಜ್ಯ ಸರ್ಕಾರದ ಮಾದರಿಯಲ್ಲಿ ಮಂಡಳಿಗೆ ಕೇಂದ್ರ ಸರಕಾರ ಸಹ ಮ್ಯಾಚಿಂಗ್ ಗ್ರ್ಯಾಂಟ್ ಅನುದಾನ ಬಿಡುಗಡೆ ಮಾಡಬೇಕೆಂದು ನಿರ್ಧರಿಸಿ ಸಭೆ ಠರಾವು ಪಾಸು ಮಾಡಿದೆ.

ಇನ್ನು ಮಂಡಳಿಗೆ ಮಾಹಿತಿ ಇಲ್ಲದೆ ಸಚಿವ ಸಂಪುಟ ಸಭೆಯಲ್ಲಿ ಯೋಜನೆಗಳಿಗೆ ಮಂಜೂರಾತಿ ನೀಡಿ ಮಂಡಳಿಯಿಂದ ಅನುದಾನ ಹಂಚಿಕೆ ಮಾಡುತ್ತಿದ್ದು, ಇದು ಸರಿಯಾದ ಕ್ರಮವಲ್ಲ. ಯೋಜನೆಗೆ ಒಪ್ಪಿಗೆ ನೀಡುವ ಮುನ್ನ ಆಯಾ ಇಲಾಖೆಗಳು ಮಂಡಳಿಯ ಅನುಮತಿ ಪಡೆಯಬೇಕು. ಈ ನಿಟ್ಟಿನಲ್ಲಿ ಮಂಡಳಿಯು ಎಲ್ಲಾ ಇಲಾಖೆಗೆ ಪತ್ರ ಬರೆಯುವಂತೆ ಸಭೆಯಲ್ಲಿ ಭಾಗಹಿಸಿದ್ದ ಸಚಿವರು, ಶಾಸಕರು ಸಲಹೆ ನೀಡಿದರು.

ಇನ್ನು ಪ್ರಸಕ್ತ 2026-27ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದ ಯೋಜನೆಗೆ ಮಂಡಳಿ ಪಾಲಿನ ಅನುದಾನ ನೀಡಲು ಒಪ್ಪಿಗೆ ಸೂಚಿಸಿದೆ. ಇದಲ್ಲದೆ ಈ ವರ್ಷ ಸಹ ಅಕ್ಷರ ಆವಿಷ್ಕಾರ ಯೋಜನೆಯಡಿ ಪ್ರತಿ ತಾಲೂಕಿಗೆ ಎಸ್.ಎಸ್.ಎಲ್.ಸಿ. ಫಲಿತಾಂಶ ಸುಧಾರಣೆಗೆ ತಲಾ 25 ಲಕ್ಷ ರೂ. ವಿಶೇಷ ಅನುದಾನ ನೀಡಲು ಸಭೆ ಸಮ್ಮತಿಸಿದೆ. ಇನ್ನು ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಗೆ ಕೈಗಾರಿಕೆ, ಪ್ರವಾಸೋದ್ಯಮ, ಕೃಷಿ ಹಾಗೂ ಜವಳಿ ನೀತಿಯಲ್ಲಿ ಪ್ರದೇಶದಲ್ಲಿ ಹೆಚ್ಚು ಹೂಡಿಕೆಯಾಗಿ ಸ್ಥಳೀಯರಿಗೆ ಉದ್ಯೋಗ ದೊರಕಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರ ಪ್ರೋತ್ಸಾಹ, ಸಬ್ಸಿಡಿ ನೀಡಬೇಕು. ಕೈಗಾರಿಕೆ ಇಲಾಖೆಯಿಂದ ಪ್ರತ್ಯೇಕ ಕೈಗಾರಿಕೆ ನೀತಿಗೆ ಮಂಡಳಿಯು ಎಷ್ಟು ಪ್ರೋತ್ಸಾಹ ಧನ ನೀಡಬಹುದು ಎಂದು ಕೇಳಿದ್ದಾರೆ. ಆದರೆ ಮಂಡಳಿ ಯಾವುದೇ ಪ್ರೋತ್ಸಾಹ ಧನ ನೀಡಲ್ಲ. ಅದನ್ನು ರಾಜ್ಯ ಸರಕಾರವೇ ಮಾಡಬೇಕು ಎಂದು ಸಭೆಯಲ್ಲಿ ಸರ್ವಸಮ್ಮತದ ನಿರ್ಣಯ ತೆಗೆದುಕೊಂಡಿದೆ.

ಸಭೆಯಲ್ಲಿ ಮಂಡಳಿ ಸದಸ್ಯರಾಗಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ-ಬಿ.ಟಿ ಸಚಿವ ಪ್ರಿಯಾಂಕ್ ಖರ್ಗೆ, ಅರಣ್ಯ, ಜೀವಿಶಾಸ್ತ್ರ, ಹಾಗೂ ಪರಿಸರ ಸಚಿವ ಈಶ್ವರ ಖಂಡ್ರೆ, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವ ಶರಣಬಸಪ್ಪ ದರ್ಶನಾಪುರ, ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಖಾತೆ ಸಚಿವ ಡಾ.ಶರಣಪ್ರಕಾಶ ಪಾಟೀಲ್, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಭೋಸರಾಜು, ಪೌರಾಡಳಿತ ಮತ್ತು ಹಜ್ ಸಚಿವ ರಹೀಂ ಖಾನ್, ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರು ಹಾಗೂ ಆಳಂದ ಶಾಸಕ ಬಿ.ಆರ್.ಪಾಟೀಲ, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ಶಾಸಕ ಬಸವರಾಜ ರಾಯರೆಡ್ಡಿ, ಕೊಪ್ಪಳ ಶಾಸಕ ಕೆ.ರಾಘವೇಂದ್ರ ಹಿಟ್ನಾಳ, ಕರ್ನಾಟಕ ರಾಜ್ಯ ಕೈಗಾರಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಮತ್ತು ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ, ವಿಧಾನ ಪರಿಷತ್ ಶಾಸಕ ಭೀಮರಾವ ಪಾಟೀಲ್, ಪ್ರಾದೇಶಿಕ ಆಯುಕ್ತರಾದ ಜಹೀರಾ ನಸ್ಸೀಮ್, ಯೋಜನಾ ಸಲಹಾ ಸಮಿತಿ ಸದಸ್ಯೆ ಪ್ರೊ.ಛಾಯಾ ದೇಗಾಂವ್ಕರ್, ಮಂಡಳಿ ಉಪ ಕಾರ್ಯದರ್ಶಿ ಸುರೇಖಾ ಕಿರಣಗಿ, ಜಂಟಿ ನಿರ್ದೇಶಕಿ ಪ್ರವೀಣ ಪ್ರಿಯಾ ಸೇರಿದಂತೆ ಇತರ ಅಧಿಕಾರಿಗಳಿದ್ದರು.

ಕಲ್ಯಾಣ ಕರ್ನಾಟಕದಲ್ಲಿ ಜಿಡಿಪಿ ಹೆಚ್ಚಳಕ್ಕೆ ಒತ್ತು: ಡಾ.ಅಜಯ್ ಸಿಂಗ್



ಕಲಬುರಗಿ,ಮೇ.20-

ರಾಜ್ಯದ ಸರಾಸರಿ ಹೋಲಿಸಿದಾಗ ಕಲ್ಯಾಣ ಕರ್ನಾಟಕ ಭಾಗದಲ್ಲಿ ಜಿಡಿಪಿ, ತಲಾ ಆದಾಯ ತುಂಬಾ ಕಡಿಮೆ ಇದೆ. ಇದನ್ನು ವೃದ್ದಿಸಲು ಕೃಷಿ, ಕೈಗಾರಿಕೆ, ಪ್ರವಾಸೋದ್ಯಮ, ಜವಳಿ ಕ್ಷೇತ್ರದಲ್ಲಿ ಪ್ರದೇಶಕ್ಕೆ ಪ್ರತ್ಯೇಕ ನೀತಿ ಅತ್ಯಗತ್ಯವಾಗಿದೆ. ಈ ನಿಟ್ಟಿನಲ್ಲಿ ಪ್ರತ್ಯೇಕ ನೀತಿ ರೂಪಿಸಿ ಜಾರಿಗೊಳಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಿರ್ಧರಿಸಲಾಗಿದೆ ಎಂದು ಕೆ.ಕೆ.ಆರ್.ಡಿ.ಬಿ ಅಧ್ಯಕ್ಷ ಡಾ.ಅಜಯ್ ಸಿಂಗ್ ಹೇಳಿದರು.

ಐವಾನ್-ಎ-ಶಾಹಿ ಅತಿಥಿಗೃಹದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಡಾ.ಅಜಯ್ ಸಿಂಗ್, ರಾಜ್ಯದ ಜಿಡಿಪಿಗೆ ಕಲ್ಯಾಣ ಕರ್ನಾಟಕ ಕೊಡುಗೆ ಹೆಚ್ಚಿಸುವ ಗುರಿಯೊಂದಿಗೆ ವಿವಿಧ ವಲಯಗಳಲ್ಲಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಉದ್ದೇಶದಿಂದ ಮಂಡಳಿಯಲ್ಲಿ ಯೋಜನೆ, ನೀತಿ ಮತ್ತು ದತ್ತಾಂಶ ವಿಶ್ಲೇಷಣಾ ವಿಭಾಗ ತೆರೆದು ಮುಂದಿನ ಐದು ವರ್ಷಕ್ಕೆ ರೂಪಿಸಲಾಗುವುದು ಎಂದರು.

ಇಂದು ನಡೆದ ಮಂಡಳಿ ಸಭೆಯಲ್ಲಿ 5,000 ಕೋಟಿ ರೂ. ಮೊತ್ತಕ್ಕೆ ಕ್ರಿಯಾ ಯೋಜನೆ ರೂಪಿಸಲು ಒಮ್ಮತ್ಯದ ನಿರ್ಧಾರ ಮಂಡಳಿ ತೆಗೆದುಕೊಂಡಿದೆ. ಆಯವ್ಯಯದಲ್ಲಿ ಘೋಷಿಸಿದ ಯೋಜನೆಗಳಿಗೆ ಆಯಾ ಇಲಾಖೆಯ ಅನುದಾನ ಜೊತೆಗೆ ಹೆಚ್ಚುವರಿಯಾಗಿ ಮಂಡಳಿ ಅನುದಾನ ನೀಡಲಾಗುವುದು. ಆರೋಗ್ಯ-ಶಿಕ್ಷಣ ಆವಿಷ್ಕಾರ, ಕಲ್ಯಾಣ ಪಥ, ವಸತಿ ನಿಲಯ ಯೋಜನೆಗಳಿಗೆ ಈ ವರ್ಷವು ಸಹ ಅನುದಾನ ನೀಡಲಾಗುವುದು ಎಂದ ಅವರು, ಉದ್ಯೋಗ ಮತ್ತು ಉದ್ಯೋಗಾಧರಿತ ಕೌಶಲ್ಯ ಹೆಚ್ಚಿಸಲು ಸೇಡಂ, ಜೇವರ್ಗಿ, ಸಿಂಧನೂರು, ರಾಯಚೂರಿನಲ್ಲಿ ತಲಾ 73 ಕೋಟಿ ರೂ. ವೆಚ್ಚದಲ್ಲಿ ಜಿಟಿಟಿಸಿ ಸ್ಥಾಪನೆ ಮಾಡಲಾಗುವುದು ಎಂದರು.

ಕಳೆದ ವರ್ಷ ಕಲಬು ರಗಿ-ಯಾದಗಿರಿಯಲ್ಲಿ ಇಂಡಸ್ಟ್ರಿ ಹಬ್ ಸ್ಥಾಪನೆಗೆ ಅನುದಾನ ಮೀಸಲಿಡಲಾಗಿತ್ತು. ಅದೇ ರೀತಿ ಈ ವರ್ಷ ರಾಯಚೂರು-ಕೊಪ್ಪಳದಲ್ಲಿ ಕೈಗಾರಿಕೆ ಹಬ್ ಸ್ಥಾಪನೆಗೆ ಒತ್ತು ನೀಡಲಾಗುತ್ತಿದೆ. ಸರಕಾರ ರಾಜ್ಯದ ಇತರೆ ನಿಗಮಕ್ಕೆ ಬಸ್ ನೀಡುತ್ತದೆ. ಆದರೆ ಕೆ.ಕೆ.ಆರ್.ಟಿ.ಸಿ. ನಿಗಮಕ್ಕೆ ಕೆ.ಕೆ.ಆರ್.ಡಿ.ಬಿ ಮಂಡಳಿಯಿಂದ ಬಸ್ ಖರೀದಿ ಮಾಡಿಕೊಳ್ಳಲು ನಿರ್ದೇಶನ ನೀಡುತ್ತದೆ. ಹೀಗಾದರೆ ಮೀಸಲಾತಿ ಎಲ್ಲಿ ಸಿಕ್ಕಂತಾಗುತ್ತದೆ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅಜಯ್ ಸಿಂಗ್ ಅವರು, ಸರ್ಕಾರ ಇತರೆ ನಿಗಮಕ್ಕೆ ನೀಡಿದಂತೆ ಕೆ.ಕೆ.ಅರ್‌ಟಿ.ಸಿ.ಸಂಸ್ಥೆಗೆ ಬಸ್ ನೀಡಿದಲ್ಲಿ ಮಾತ್ರ ಹೆಚ್ಚುವರಿ ಬಸ್ ಒದಗಿಸಲು ಮಂಡಳಿ ಸಿದ್ಧವಿದೆ. ಒಂದು ವೇಳೆ ಸರ್ಕಾರ ಕೆ.ಕೆ.ಆರ್.ಟಿ.ಸಿ ಗೆ ಬಸ್ ನೀಡದಿದ್ದಲ್ಲಿ ಮಂಡಳಿಯಿಂದಲೂ ಅನುದಾನ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಕಳೆದ 2023-24 ರಿಂದ 2025-26ನೇ ಸಾಲಿನ ಅಂತ್ಯದವರೆಗೆ ಸುಮಾರು 9,500 ಕೋಟಿ ರೂ. ಅನುದಾನ ಖರ್ಚು ಮಾಡಲಾಗಿದೆ. ಪ್ರಸಕ್ತ 2026-27ನೇ ಸಾಲಿಗೆ ರಾಜ್ಯ ಸರ್ಕಾರದಿಂದ ಹಂಚಿಕೆಯಾದ 5,000 ಕೋಟಿ ರೂ. ಅನುದಾನ ಇದೇ ವರ್ಷದಲ್ಲಿ ಖರ್ಚು ಮಾಡಿ ಅಭಿವೃದ್ದಿಯಲ್ಲಿ ಹೊಸ ಕ್ರಾಂತಿ ಮಾಡುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ನಳಿನ್ ಅತುಲ್ ಇದ್ದರು.

ಮೇ 20 ರಿಂದ ಗೃಹಲಕ್ಷ್ಮೀ 30ನೇ ಕಂತಿನ 2 ಸಾವಿರ ರೂ. ಫಲಾನುಭವಿಗಳಿಗೆ ಜಮಾ- ರೆಡ್ಡಿ ಶ್ರೀ ನಿವಾಸ

ಕೊಪ್ಪಳ ಮೇ 20-

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮೀ ಯೋಜನೆಯ 30ನೇ ಕಂತಿನ ಹಣ ವರ್ಗಾವಣೆ ಮಾಡಲಾಗಿದ್ದು, ಮೇ 20 ರಿಂದ ಜಿಲ್ಲೆಯ ಫಲಾನುಭವಿಗಳ ಖಾತೆಗೆ ಡಿಬಿಟಿ ಮೂಲಕ ನೇರವಾಗಿ ಹಣ ಜಮಾ ಆಗಲಿದೆ ಎಂದು ಕೊಪ್ಪಳ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀ ನಿವಾಸ ಅವರು ಹೇಳಿದರು.

2026ರ ಏಪ್ರಿಲ್ ಮಾಹೆಯಲ್ಲಿ ಕೊಪ್ಪಳ ಜಿಲ್ಲೆಯ 3,09,274 ಮಹಿಳಾ ಫಲಾನುಭವಿಗಳಿಗೆ ಸುಮಾರು ರೂ. 61 ಕೋಟಿ, 85 ಲಕ್ಷದ 48 ಸಾವಿರ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. ರಾಜ್ಯ ಸರ್ಕಾರವು ಗೃಹಲಕ್ಷ್ಮೀ ಯೋಜನೆಯನ್ನು ಜಾರಿಗೆಗೊಳಿಸದ ನಂತರ ಇಲ್ಲಿಯವರೆಗೆ ಕೊಪ್ಪಳ ಜಿಲ್ಲೆಯ ಅರ್ಹ ಮಹಿಳಾ ಫಲಾನುಭವಿಗಳಿಗೆ ಒಟ್ಟು 30 ಕಂತುಗಳಲ್ಲಿ ರೂ. 1860 ಕೋಟಿಗಳನ್ನು ನೇರವಾಗಿ ಆಯಾ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಪಾವತಿಸಲಾಗಿದೆ. ಈ ಯೋಜನೆಯಡಿ ಒಬ್ಬ ಮಹಿಳಾ ಫಲಾನುಭವಿಗಳಿಗೆ ಇಲ್ಲಿಯವರೆಗೆ ರೂ. 60,000 ಗಳ ಸಹಾಯಧನ ಸಿಕ್ಕಿದಂತಾಗಿದೆ. ಇದರಿಂದ ಮಹಿಳೆಯರ ಆರ್ಥಿಕ ಸ್ವಾವಲಂಭನೆ ಹೆಚ್ಚಾಗಿದೆ. ಮಹಿಳೆಯರಿಗೆ ಕುಟುಂಬದ ನಿರ್ವಹಣೆ, ಮನೆಯ ದೈನಂತಿನ ಖರ್ಚುಗಳಿಗೆ ಸಹಾಯ, ವಿಶೇಷವಾಗಿ ಮಕ್ಕಳ ಶಿಕ್ಷಣಕ್ಕೆ ಗೃಹಲಕ್ಷ್ಮೀ ಯೋಜನೆಯ ಸಹಾಯಧನವು ಅತ್ಯಂತ ಸಹಕಾರಿಯಾಗಿದೆ ಮತ್ತು ಗ್ರಾಮೀಣ ಭಾಗದ ಬಡ ಕುಟುಂಬಗಳ ಜೀವನಮಟ್ಟ ಸುಧಾರಣೆಗೂ ತುಂಬಾ ಅನುಕೂಲವಾಗಿದೆ. ಯಾವುದೇ ಮಧ್ಯವರ್ತಿಗಳ ಹಾವಳಿ ಇಲ್ಲದೇ ಫಲಾನುಭವಿಗಳಿಗೆ ನೇರವಾಗಿ ಸಹಾಯಧನ ದೊರೆಯುವ ಮಹತ್ವದ ಯೋಜನೆ ಇದಾಗಿದೆ ಎಂದರು. ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ ಅವರ ನೇತೃತ್ವದ ನಮ್ಮ ರಾಜ್ಯ ಸರ್ಕಾರವು ನುಡಿದಂತೆ ನಡೆಯುತ್ತಿದೆ. ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಅವರು ನಿರ್ದೇಶನದಂತೆ ಮತ್ತು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರು, ಉಪಾಧ್ಯಕ್ಷರ ಹಾಗೂ ಜಿಲ್ಲೆಯ ಸಂಸದರು ಮತ್ತು ಶಾಸಕರ ಮಾರ್ಗದರ್ಶನದಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಪಂಚ ಗ್ಯಾರಂಟಿ ಯೋಜನೆಗಳನ್ನು ಸಮಪರ್ಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ತಿಳಿಸಿದರು.

ತಾಂತ್ರಿಕ ಸಮಸ್ಯೆಗಳಿಂದಾಗಿ ಜಿಲ್ಲೆಯ 1302 ಫಲಾನುಭವಿಗಳ ಸಹಾಯಧನವು ಫಲಾನುಭವಿಗಳಿಗೆ ಜಮಾ ಆಗದೆ ಸರ್ಕಾರಕ್ಕೆ ವಾಪಸ್ ಆಗಿರುತ್ತದೆ. ಈ ಬಗ್ಗೆ ಸಮಸ್ಯೆಯನ್ನು ಸರಿಪಡಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು, ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಫಲಾನುಭವಿಗಳ ಸಮಸ್ಯೆಯನ್ನು ಸರಿಪಡಿಸುವಂತೆ ತಿಳಿಸಲಾಗಿದೆ. ಫಲಾನುಭವಿಗಳು ಸಹ ತಮ್ಮ ಬ್ಯಾಂಕ್ ಖಾತೆಯ ಇ-ಕೆವೈಸಿ, ಆಧಾರ್ ಲಿಂಕ್, ಬ್ಯಾಂಕ್ ಸೀಡಿಂಗ್ ಮತ್ತು ಇತರೆ ಸಮಸ್ಯೆಗಳನ್ನು ಸರಿಪಡಿಸಿಕೊಂಡು ಗೃಹಲಕ್ಷ್ಮೀ ಯೋಜನೆಯ ಸಹಾಯಧನ ಪಡೆದುಕೊಳ್ಳಬೇಕು ಎಂದರು.

ಈ ಬಾರಿಯ ಗೃಹಲಕ್ಷ್ಮೀ ಯೋಜನೆಯ ಸಹಾಯಧನ ಮೊತ್ತವನ್ನು ಖಜಾನೆ ಇಲಾಖೆಯ ಎನ್.ಟಿ.ಟಿ.ಎ.ಐ ವರ್ಗಾವಣೆ ಮೂಲಕ ಪಾವತಿಸಲಾಗಿದ್ದು, ಮೇ 19 ರಿಂದ ಗೃಹಲಕ್ಷ್ಮೀ ಯೋಜನೆಯ ಕೊಪ್ಪಳ ಜಿಲ್ಲೆಯ ಎಲ್ಲಾ ಮಹಿಳಾ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಒಂದೇ ಬಾರಿಗೆ ಸಹಾಯಧನ ಜಮಾ ಆಗಲಿದೆ. ಫಲಾನುಭವಿಗಳು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು. ಜಿಲ್ಲೆಯ ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಗಳ ಪರವಾಗಿ ರಾಜ್ಯ ಸರ್ಕಾರಕ್ಕೆ ಈ ಮೂಲಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದು ಕೊಪ್ಪಳ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀ ನಿವಾಸ ಅವರು ಹೇಳಿದರು.

ಒಂದನೇಯ ಪುಟದಿಂದ

ಬೊಮ್ಮನಹಳ್ಳಿ ಶಿವರಾಜ ಮನೆಗೆ ಶ್ರೀದೇವಿ ಆರ್ ನಾಯಕ ಬೇಟಿ

ಲ್ದಾರ, ರಾಮನಗೌಡಮೇಟಿ. ಹಬ್ರಾಮ್ ಕಮಲದಿನ್ನಿ ರಮೇಶಬಾಗೂರು, ಅಭಿಷೇಕ ಪೂಜಾರಿ, ಶಿವರಾಜ ಮುದಕಿ,ಬಾಲಪ್ಪನಾಯಕ, ಉದಯಮನಗಾರ, ಶರಣಬಸವ ಮ್ಯಾಕಲದೊಡ್ಡಿ, ಮೌನೇಶ ಕಕ್ಕಲದೊಡ್ಡಿ, ಪ್ರಕೃದ್ದಿನ ವಂದಲಿ, ಮನೋಜ್ ಗಾಣದಾಳ,ಸೇರಿದಂತೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಭಾಗವಹಿಸಿದ್ದರು.

ಸುದ್ದಿ ಪೈಲ್ ಅರಕೇರಾ ಸಂಖ್ಯೆ 20(1) ಬೊಮ್ಮನಹಳ್ಳಿ ಗ್ರಾಮದ ಶಿವರಾಜ ಇವರ ಮನೆಗೆ ವಿದ್ಯುತ್ ಅವಘಡ ಶಿವರಾಜ ಇವರ ನಿವಾಸಕ್ಕೆ ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀದೇವಿ ಆರ್ ನಾಯಕ ಬೇಟಿ ನೀಡಿ ಕುಟುಂಬಸ್ಥರಿಗೆ ಆಹಾರ ಧಾನ್ಯಗಳನ್ನು ಧನಸಹಾಯ ನೀಡಿದರು.

ಆಶ್ರಯ ಕಾಲೋನಿಯ ನಿವಾಸಿಗಳಿಗೆ ಹಕ್ಕುಪತ್ರ ನೀಡಲು ಒತ್ತಾಯ ಸಿಪಿಐ(ಎಂಎಲ್) ರೆಡ್ ಸ್ಟಾರ್ ವತಿಯಿಂದ ಮಹಾನಗರ ಪಾಲಿಕೆಗೆ ಮನವಿ

ಎಂದು ಆಗ್ರಹಿಸಿದರು.

ಮನವಿ ಪತ್ರವನ್ನು ಮಹಾನಗರ ಪಾಲಿಕೆಯ ಮ್ಯಾನೇಜರ್ ಶ್ರೀಮತಿ ವಿಜಯಲಕ್ಷ್ಮೀ ಅವರಿಗೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಜಿ. ಅಡವಿ ರಾವ್, ನಿರಂಜನ್, ನೂರ್ ಜಹಾನ್ ಶಫಿ ಸೇರಿದಂತೆ ತಾಲೂಕು ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಪ್ರಶ್ನಿಸುವವರ ಮೇಲೆ ಡಿಜಿಟಲ್ ಸೆನ್ಸಾರ್‌ಶಿಪ್: ಸಿಂಗರ್ ರಿಹಾನಾರಿಂದ ಜರ್ನಲಿಸ್ಟ್ ಲಿಂಗ್‌ವರೆಗೆ...

ಜಾಗತಿಕ ವೇದಿಕೆಯಲ್ಲಿ ಅಧಿಕಾರಸ್ಥರೆಡೆಗೆ ಬೊಟ್ಟು ಮಾಡಿದ ಕೂಡಲೇ, ಪ್ರಶ್ನಿಸಿದವರ ಅಸ್ತಿತ್ವವನ್ನೇ ಹತ್ತಿಕ್ಕಲು ಭಾರತದಂತಹ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಪ್ರಯತ್ನಗಳು ನಡೆಯುತ್ತಿರುವುದು ನಿಜಕ್ಕೂ ಖೇದಕರ. ಸೋಷಿಯಲ್ ಮೀಡಿಯಾ ದೈತ್ಯ ಕಂಪನಿಗಳು ತಮ್ಮ ಮಾರುಕಟ್ಟೆ ಹಿತಾಸಕ್ತಿಗಾಗಿ ಇಂತಹ ಸೈಬರ್ ಬುಲ್ಲಿಯಿಂಗ್ ಮತ್ತು ಸರ್ಕಾರದ ಒತ್ತಡಗಳಿಗೆ ಸುಲಭವಾಗಿ ಶರಣಾಗುತ್ತಿರುವುದು ಪ್ರಜಾಪ್ರಭುತ್ವದ ಆಶಯಗಳಿಗೆ ಮಾರಕ.

ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭ ಎಂದು ಕರೆಯಲಾಗುವ ಪತ್ರಿಕೋದ್ಯಮದ ಮೂಲ ಉದ್ದೇಶವೇ ಅಧಿಕಾರದಲ್ಲಿರುವವರನ್ನು ಪ್ರಶ್ನಿಸುವುದು. ಆದರೆ, ಸದ್ಯಕ್ಕೆ ಭಾರತದ ಮಟ್ಟಿಗೆ ಈ ಮಾತು ಪೂರ್ತಿಯಾಗಿ ನಿಜವೆನಿಸುತ್ತಿಲ್ಲ. ಇದಕ್ಕೆ ನಾರ್ವೆಯ ಪತ್ರಕರ್ತೆ ಹೆಲೆ ಲಿಂಗ್ ( ) ಅವರ ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಮ್ ಖಾತೆಗಳು ಸಸ್ಪೆಂಡ್ ಆಗಿರುವುದೇ ಸಾಕ್ಷಿ.

ನಾರ್ವೆಯ ಓಸ್ಲೋದಲ್ಲಿ ನಡೆದ ಜಂಟಿ ಮಾಧ್ಯಮ ಗೋಷ್ಠಿಯ ವೇಳೆ, ಓಸ್ಲೋದ ಪ್ರಮುಖ ಪತ್ರಿಕೆ ದಾಗ್‌ಸಾವಿಸೆನ್ () ವರದಿಗಾರ್ತಿ ಹೆಲೆ ಲಿಂಗ್, ಪ್ರಧಾನಿ ನರೇಂದ್ರ ಮೋದಿಯವರನ್ನು ಉದ್ದೇಶಿಸಿ ನೇರ ಪ್ರಶ್ನೆಯೊಂದನ್ನು ಎಸೆದರು. ''ಜಗತ್ತಿನ ಅತ್ಯಂತ ಸ್ವತಂತ್ರ ಮಾಧ್ಯಮಗಳನ್ನು ಹೊಂದಿರುವ ದೇಶದಿಂದ ನೀವೇಕೆ ಕೆಲವು ಪ್ರಶ್ನೆಗಳನ್ನು ಸ್ವೀಕರಿಸುತ್ತಿಲ್ಲ?'' ಎಂದು. ಆದರೆ, ಭಾರತದ ಪ್ರಧಾನಿ ಆ ಪ್ರಶ್ನೆಗೆ ತಿರುಗಿಯೂ ನೋಡದೆ ಅಲ್ಲಿಂದ ಕಾಲ್ಕಿತ್ತರು.

ಘಟನೆಯ ವಿಡಿಯೋವನ್ನು ಹೆಲೆ ಲಿಂಗ್ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡು, ''ದಿನವಿಡೀ ನಾನು ನನ್ನ ಇನ್‌ಸ್ಟಾಗ್ರಾಮ್ ಖಾತೆಗೆ ಲಾಗಿನ್ ಆಗಲು ಹೆಣಗಾಡಿದ್ದೇನೆ. ಈಗ ನನ್ನ ಖಾತೆಗಳನ್ನು ಅಮಾನತುಗೊಳಿಸಲಾಗಿದೆ. ಇದು ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ನಾನು ತೆತ್ತ ಒಂದು ಸಣ್ಣ ಬೆಲೆ. ಹಿಂದೆಂದೂ ನನಗೆ ಈ ರೀತಿ ಆಗಿರಲಿಲ್ಲ'' ಎಂದು ಬರೆದುಕೊಂಡಿದ್ದಾರೆ. ಆ ವಿಡಿಯೋ ಹಾಗೂ ಸಂಬಂಧಿತ ಸುದ್ದಿಗಳು ವೈರಲ್ ಆದವು. ಕೆಲ ಭಾರತೀಯರು ಹೆಲೆಯ ಪರವಾಗಿ ನಿಂತರೆ, ಕೆಲವರು ವಿರೋಧಿಸುತ್ತಿದ್ದಾರೆ.

ಘಟನೆ ಬಳಿಕ ಹೆಲೆ, ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ () ಅಧಿಕಾರಿಗಳೊಂದಿಗೂ ಮಾಧ್ಯಮ ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳ ಕುರಿತು ವಾಗ್ವಾದ ನಡೆಸಿದ್ದರು. ಇದೇ ಕಾರಣಕ್ಕೆ ಮೋದಿ ಭಕ್ತಗಣ ಸಾಮಾಜಿಕ ಜಾಲತಾಣಗಳಲ್ಲಿ ಅವರನ್ನು ವಿದೇಶಿ ಏಜೆಂಟ್, ಚೀನಾ ಪರ ಪ್ರಚಾರಕಿ ಎಂದು ತಲೆಬುಡವಿಲ್ಲದೆ ತೀವ್ರವಾಗಿ ಟ್ರೋಲ್ ಮಾಡಲು ಶುರುವಿಟ್ಟುಕೊಂಡಿತು.

ಭಿನ್ನಾಭಿಪ್ರಾಯಗಳನ್ನು ತಾರ್ಕಿಕವಾಗಿ ಎದುರಿಸಲಾಗದಿದ್ದಾಗ ಬಳಸಲಾಗುವ ಇತ್ತೀಚಿನ ಅಪಾಯಕಾರಿ ಅಸ್ತ್ರ ಮಾಸ್ ರಿಪೋರ್ಟಿಂಗ್ ( ). ''ಭಾರತೀಯ ಮೂಲದ ಸಾವಿರಾರು ಟ್ರೋಲ್ ಖಾತೆಗಳು ಹೆಲೆ ವಿರುದ್ಧ ಮುಗಿಬಿದ್ದವು. ಈ ಗುಂಪುಗಳು ಸಂಘಟಿತವಾಗಿ ಅವರ ಖಾತೆಗಳ ವಿರುದ್ಧ ಮಾಸ್ ರಿಪೋರ್ಟ್ ( ) ಮಾಡಿವೆ. ಆದರೆ ಮೆಟಾ ಸರಿಯಾದ ತನಿಖೆ ನಡೆಸದೆ ಆಕೆಯ ಖಾತೆಗಳನ್ನು ಸಸ್ಪೆಂಡ್ ಮಾಡಿದೆ'' ಎನ್ನುತ್ತಿದ್ದಾರೆ ತಾಂತ್ರಿಕ ತಜ್ಞರು.

ಕೇಂದ್ರ ಸರ್ಕಾರ ಬೆಂಬಲಿತ ಐಟಿ ಸೆಲ್‌ಗಳು ಮತ್ತು ಸಂಘಟಿತ ಸೈಬರ್ ಗುಂಪುಗಳು ವಿರೋಧಿಗಳನ್ನು ಹತ್ತಿಕ್ಕಲು ಕಾನ್ಸರ್ಟೆಡ್ ರಿಪೋರ್ಟಿಂಗ್ ( ) ತಂತ್ರವನ್ನು ಬಳಸುತ್ತವೆ. ತಾಂತ್ರಿಕವಾಗಿ, ಒಂದು ಖಾತೆಯ ವಿರುದ್ಧ ಏಕಕಾಲದಲ್ಲಿ ಸಾವಿರಾರು ದೂರುಗಳು ಹೋದಾಗ, ಮೆಟಾ ಅಥವಾ ಎಕ್ಸ್ ಸಂಸ್ಥೆಗಳ ಕೃತಕ ಬುದ್ಧಿಮತ್ತೆ () ವ್ಯವಸ್ಥೆಯು ಯಾವುದೇ ಮಾನವ ಪರಿಶೀಲನೆ ಇಲ್ಲದೆ ಆ ಖಾತೆಯನ್ನು ಬ್ಲಾಕ್ ಮಾಡುತ್ತದೆ.

ಮೇಲಾಗಿ, ಭಾರತವು ವಿಶ್ವದಲ್ಲೇ ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಮ್‌ಗೆ ಅತಿ ದೊಡ್ಡ ಮಾರುಕಟ್ಟೆ. ಹೀಗಾಗಿ, ಈ ದೈತ್ಯ ಕಂಪನಿಗಳು ತಮ್ಮ ವ್ಯಾಪಾರ ಉಳಿಸಿಕೊಳ್ಳಲು ಸ್ಥಳೀಯ ಬಹುಸಂಖ್ಯಾತರ ಆಕ್ರೋಶಕ್ಕೆ ಅಥವಾ ಸರ್ಕಾರದ ಒತ್ತಡಕ್ಕೆ ಸುಲಭವಾಗಿ ಮಣಿಯುತ್ತವೆ ಎಂಬುದು ಜಾಗತಿಕ ಮಾಧ್ಯಮ ವಿಶ್ಲೇಷಕರ ಆಪಾದನೆ.

ಜಾಗತಿಕ ಪ್ರೆಸ್ ಫ್ರೀಡಂ ಇಂಡೆಕ್ಸ್ ( ) ಪ್ರಕಾರ, ನಾರ್ವೆ ದೇಶವು ವಿಶ್ವದಲ್ಲೇ ಮೊದಲ ಸ್ಥಾನದಲ್ಲಿದೆ (1). ಆದರೆ ಅದೇ ಪಟ್ಟಿಯಲ್ಲಿ ಭಾರತ ತಳಮಟ್ಟದಲ್ಲಿದೆ. ಅಂದರೆ, 157ನೇ ಸ್ಥಾನಕ್ಕೆ ಕುಸಿದಿದೆ. ಈ ವೈರುಧ್ಯವೇ ಲಿಂಗ್ ಅವರ ಪ್ರಶ್ನೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಷ್ಟೊಂದು ತೂಕ ಬರಲು ಕಾರಣವಾಯಿತು.

ಹೆಲೆ ಲಿಂಗ್ ಎದುರಿಸಿದ ಈ ಪರಿಸ್ಥಿತಿ ಮೊದಲ ಬಾರಿಗೆ ಜರುಗಿದ್ದಲ್ಲ. ಈ ಹಿಂದೆ ದೆಹಲಿಯಲ್ಲಿ ರೈತರ ಪ್ರತಿಭಟನೆ ( ) ನಡೆಯುತ್ತಿದ್ದ ಸಂದರ್ಭದಲ್ಲಿ ಜಾಗತಿಕ ಪಾಪ್ ಗಾಯಕಿ ರಿಹಾನಾ (), ಪ್ರತಿಭಟನೆಯನ್ನು ಬೆಂಬಲಿಸಿ, ''ನಾವೇಕೆ ಇದರ ಬಗ್ಗೆ ಮಾತನಾಡುತ್ತಿಲ್ಲ?'' ಎಂದು ಕೆಲವೇ ಪದಗಳ ಒಂದು ಟ್ವೀಟ್ ಮಾಡಿದ್ದರಷ್ಟೇ. ಆಗಲೂ ಇಂತಹುದೇ ಡಿಜಿಟಲ್ ದಾಳಿ ನಡೆದಿತ್ತು. ರಿಹಾನಾ ಹಣ ಪಡೆದು ಭಾರತದ ವಿರುದ್ಧ ಟ್ವೀಟ್ ಮಾಡುತ್ತಿದ್ದಾರೆ ಎಂದು ಬಿಂಬಿಸಲಾಯಿತು. ಆಕೆಯ ಹಳೆಯ ಫೋಟೋಗಳನ್ನು ದುರುಪಯೋಗಪಡಿಸಿಕೊಂಡು ಚಾರಿತ್ರ್ಯ ಹರಣ ಮಾಡಲು ಯತ್ನಿಸಲಾಯಿತು. ಭಾರತದಲ್ಲಿ ಆಕೆಯ ಹಾಡುಗಳನ್ನು ಬಹಿಷ್ಕರಿಸುವಂತೆ ಅಭಿಯಾನವನ್ನೂ ನಡೆಸಲಾಯಿತು.

ಜಾಗತಿಕ ಪರಿಸರ ಕಾರ್ಯಕರ್ತೆ ಗ್ರೆಟಾ ಥನ್‌ಬರ್ಗ್ ಕೂಡ ದೆಹಲಿಯ ರೈತರ ಪ್ರತಿಭಟನೆಗೆ ಬೆಂಬಲ ಸೂಚಿಸಿದ್ದರು. ಪ್ರತಿಭಟನೆಯನ್ನು ಹೇಗೆ ಬೆಂಬಲಿಸಬೇಕು ಎಂಬ ಮಾಹಿತಿ ಹೊಂದಿದ್ದ ಟೂಲ್‌ಕಿಟ್ ಎಂಬ ಗೂಗಲ್ ದಾಖಲೆಯನ್ನು ಇಂಟರ್ನೆಟ್‌ನಲ್ಲಿ ಹಂಚಿಕೊಂಡಿದ್ದರು. ಇದನ್ನು ಭಾರತ ಸರ್ಕಾರದ ವಿರುದ್ಧ ನಡೆದ ಅಂತಾರಾಷ್ಟ್ರೀಯ ಪಿತೂರಿ ಎಂದು ಬಿಂಬಿಸಿದ ದೆಹಲಿ ಪೊಲೀಸರು, ಗ್ರೆಟಾ ವಿರುದ್ಧ ದೇಶದ್ರೋಹದ ಐಪಿಸಿ ಸೆಕ್ಷನ್‌ಗಳ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದರು. ಅಲ್ಲದೆ, ಈ ಟೂಲ್‌ಕಿಟ್ ತಯಾರಿಕೆಯಲ್ಲಿ ಗ್ರೆಟಾಗೆ ಆನ್‌ಲೈನ್ ಮೂಲಕ ನೆರವಾಗಿದ್ದ ಬೆಂಗಳೂರಿನ ಯುವ ಪರಿಸರ ಕಾರ್ಯಕರ್ತೆ ದಿಶಾ ರವಿ ಅವರನ್ನು ಬಂಧಿಸಿ ಜೈಲಿಗಟ್ಟಿದ್ದರು.

ಬ್ರಿಟಿಷ್ ಮತ್ತು ಆಸ್ಟ್ರೇಲಿಯನ್ ಪೌರತ್ವ ಹೊಂದಿದ್ದ ಮಹಿಳಾ ಪತ್ರಕರ್ತೆ ಅವನಿ ಡಯಾಸ್ ಅವರು (ಆಸ್ಟ್ರೇಲಿಯನ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್) ಸಂಸ್ಥೆಯ ದಕ್ಷಿಣ ಏಷ್ಯಾ ಮುಖ್ಯಸ್ಥರಾಗಿ ಭಾರತದಲ್ಲೇ ಇದ್ದು ವರದಿ ಮಾಡುತ್ತಿದ್ದರು. ಅವರು ಭಾರತದ ಪ್ರಜಾಪ್ರಭುತ್ವದ ಸ್ಥಿತಿಗತಿ ಮತ್ತು ಸಿಖ್ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಯ ಕುರಿತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಕ್ಷ್ಯಚಿತ್ರವೊಂದನ್ನು ಸಿದ್ಧಪಡಿಸಿದ್ದರು. ಇದು ಹೊರಬರುತ್ತಿದ್ದಂತೆ ಭಾರತ ಸರ್ಕಾರದ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಆದೇಶದ ಮೇರೆಗೆ ಯೂಟ್ಯೂಬ್‌ನಲ್ಲಿ ಆ ವಿಡಿಯೋವನ್ನು ಭಾರತೀಯರಿಗೆ ಕಾಣಿಸದಂತೆ ಬ್ಲಾಕ್ ಮಾಡಲಾಯಿತು. ಜೊತೆಗೆ ಆಕೆಯ ವಿರುದ್ಧ ತೀವ್ರ ಡಿಜಿಟಲ್ ಟ್ರೋಲಿಂಗ್ ನಡೆಸಿ, ಸಾರ್ವತ್ರಿಕ ಚುನಾವಣೆಯ ವರದಿಗಾರಿಕೆಗೆ ಆಕೆಗೆ ವೀಸಾ ನವೀಕರಣ ಮಾಡಲು ಭಾರತ ಸರ್ಕಾರ ನಿರಾಕರಿಸಿತು. ಇದರಿಂದಾಗಿ ಆಕೆ ಅನಿವಾರ್ಯವಾಗಿ ಭಾರತವನ್ನು ತೊರೆಯಬೇಕಾಯಿತು.

ಮಾಧ್ಯಮ ಸಂಸ್ಥೆ ಲಂಡನ್‌ನಲ್ಲಿದ್ದುಕೊಂಡು 2002ರ ಗುಜರಾತ್ ಗಲಭೆಗಳಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಪಾತ್ರದ ಕುರಿತು ಎರಡು ಭಾಗಗಳ ವಿಶೇಷ ಸಾಕ್ಷ್ಯಚಿತ್ರವನ್ನು ಬಿಡುಗಡೆ ಮಾಡಿತ್ತು. ಈ ಸಾಕ್ಷ್ಯಚಿತ್ರ ಜಾಗತಿಕವಾಗಿ ತೆರೆಕಾಣುತ್ತಿದ್ದಂತೆ ಭಾರತ ಸರ್ಕಾರ ತಕ್ಷಣವೇ ಎಚ್ಚೆತ್ತು, ತನ್ನ ತುರ್ತು ಅಧಿಕಾರ ಬಳಸಿ ಯೂಟ್ಯೂಬ್ ಮತ್ತು ಟ್ವಿಟರ್‌ನಿಂದ ಇದರ ಲಿಂಕ್‌ಗಳನ್ನು ಭಾರತದಲ್ಲಿ ನಿಷೇಧಿಸಿತು. ಈ ಲಿಂಕ್‌ಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡ ಸಾಮಾನ್ಯ ಭಾರತೀಯರ ಖಾತೆಗಳನ್ನೂ ಸಸ್ಪೆಂಡ್ ಮಾಡಲಾಯಿತು. ಈ ಬೆನ್ನಲ್ಲೇ, ದೆಹಲಿ ಮತ್ತು ಮುಂಬೈನಲ್ಲಿದ್ದ ಬಿಬಿಸಿ ಕಚೇರಿಗಳ ಮೇಲೆ ಭಾರತದ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ದಾಳಿ ನಡೆಸಿ ದಿನಗಟ್ಟಲೆ ಪರಿಶೀಲನೆ ನಡೆಸಿದ್ದರು.

ಟ್ವಿಟರ್ (ಇಂದಿನ ಎಕ್ಸ್) ಸಂಸ್ಥೆಯ ಸಹ-ಸ್ಥಾಪಕ ಮತ್ತು ಮಾಜಿ ಸಿಇಒ ಜ್ಯಾಕ್ ಡೋರ್ಸಿ, ಅಮೆರಿಕದಲ್ಲಿ ನೀಡಿದ ಸಂದರ್ಶನವೊಂದರಲ್ಲಿ ಭಾರತ ಸರ್ಕಾರದ ಡಿಜಿಟಲ್ ಒತ್ತಡದ ಕರಾಳ ಮುಖವನ್ನು ಬಹಿರಂಗಪಡಿಸಿದ್ದರು. ಭಾರತದಲ್ಲಿ ರೈತರ ಪ್ರತಿಭಟನೆ ನಡೆಯುತ್ತಿದ್ದ ಸಮಯದಲ್ಲಿ ಸರ್ಕಾರದ ನೀತಿಗಳನ್ನು ಟೀಕಿಸುತ್ತಿದ್ದ ಪತ್ರಕರ್ತರು ಮತ್ತು ಸಕ್ರಿಯ ಹೋರಾಟಗಾರರ ಟ್ವಿಟರ್ ಖಾತೆಗಳನ್ನು ಸಂಪೂರ್ಣವಾಗಿ ಬ್ಯಾನ್ ಮಾಡುವಂತೆ ಭಾರತ ಸರ್ಕಾರ ತಮಗೆ ಸತತವಾಗಿ ಆನ್‌ಲೈನ್ ಮೂಲಕ ಒತ್ತಡ ಹೇರಿತ್ತು ಎಂದು ಅವರು ಒಪ್ಪಿಕೊಂಡಿದ್ದರು. ಒಂದು ವೇಳೆ ಟ್ವಿಟರ್ ಸಂಸ್ಥೆಯು ಸರ್ಕಾರದ ಆದೇಶಗಳನ್ನು ಪಾಲಿಸದಿದ್ದರೆ ಭಾರತದಲ್ಲಿರುವ ಟ್ವಿಟರ್ ಕಚೇರಿಗಳನ್ನು ಮುಚ್ಚಿಸುವುದಾಗಿ ಮತ್ತು ಅಲ್ಲಿನ ಉದ್ಯೋಗಿಗಳ ಮನೆಗಳ ಮೇಲೆ ದಾಳಿ ಮಾಡಿಸುವುದಾಗಿ ತಮಗೆ ಬೆದರಿಕೆ ಹಾಕಲಾಗಿತ್ತು ಎಂದು ವಿಶ್ವದ ಮುಂದೆ ಹೇಳಿಕೆ ನೀಡಿದ್ದರು.

ಇಂತಹ ಸಂಘಟಿತ ಸೈಬರ್ ಬುಲ್ಲಿಯಿಂಗ್ ( ) ಮುಖಾಂತರ ಸಮಾಜದಲ್ಲಿ ಒಂದು ರೀತಿಯ ಭಯದ ವಾತಾವರಣ ಸೃಷ್ಟಿಸಲಾಗುತ್ತದೆ. ''ನಾವು ಪ್ರಶ್ನೆ ಕೇಳಿದರೆ ನಮ್ಮ ಖಾತೆಗಳೂ ನಾಶವಾಗಬಹುದು, ನಮ್ಮ ಮೇಲೂ ದಾಳಿ ನಡೆಯಬಹುದು'' ಎಂದು ಸಾಮಾನ್ಯ ಜನರೂ ಪ್ರಶ್ನೆ ಕೇಳಲು ಹೆದರುವಂತೆ ಮಾಡುವುದೇ ಇದರ ಮುಖ್ಯ ಉದ್ದೇಶ.

ಜಾಗತಿಕ ವೇದಿಕೆಯಲ್ಲಿ ಅಧಿಕಾರಸ್ಥರೆಡೆಗೆ ಬೊಟ್ಟು ಮಾಡಿದ ಕೂಡಲೇ, ಪ್ರಶ್ನಿಸಿದವರ ಅಸ್ತಿತ್ವವನ್ನೇ ಹತ್ತಿಕ್ಕಲು ಭಾರತದಂತಹ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಪ್ರಯತ್ನಗಳು ನಡೆಯುತ್ತಿರುವುದು ನಿಜಕ್ಕೂ ಖೇದಕರ.

ಕಲ್ಯಾಣ ಕರ್ನಾಟಕ ಭಾಗದ ಉದ್ಯಮದ ಬೆಳವಣಿಗೆಗೆ ಕೃಷಿಕಲ್ಪ ಸೆಂಟರ್ ಆಫ್ ಎಕ್ಸಲೆನ್ಸ್ ಪೂರಕವಾಗಲಿದೆ: ಸಚಿವ ಪ್ರಿಯಾಂಕ್ ಖರ್ಗೆ



ಕಲಬುರಗಿ,ಮೇ.20-

ಕೃಷಿಕಲ್ಪ ಸೆಂಟರ್ ಆಫ್ ಎಕ್ಸ ಲೆನ್ಸ್ ಕಲ್ಯಾಣ ಕರ್ನಾಟಕ ಭಾಗದ ಉದ್ಯಮ ಬೆಳವಣಿಗೆಗೆ ಪೂರಕವಾಗಲಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದ ಗೋಲ್ಡ್ ಹಬ್ ನಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್, ಐಟ - ಬಿಟಿ ಇಲಾಖೆ, ಕೆಕೆ ಆರ್ ಡಿಬಿ ಹಾಗೂ ಕೃಷಿಕಲ್ಪ ಅಡಿಯಲ್ಲಿ ಆಯೋಜಿಸಲಾಗಿದ್ದ ಕೃಷಿಕಲ್ಪ ಸೆಂಟರ್ ಆಫ್ ಎಕ್ಸ ಲೆನ್ಸ್ () ಉದ್ಘಾಟನೆ ಹಾಗೂ 'ವಿಕಾಸ ಮತ್ತು ಪ್ರೇರಣಾ' ಕಾರ್ಯಕ್ರಮಗಳ ಉದ್ಘಾಟನೆ ನೆರವೇರಿಸಿ ಅವರು ಮಾತನಾಡುತ್ತಿದ್ದರು.

ಕರ್ನಾಟಕದಲ್ಲಿ 18,000 ನೂತನ ಸ್ಟಾರ್ಟ್ ಅಪ್ ಗಳು ಪ್ರಾರಂಭಕ್ಕೆಗೊಳ್ಳಲು ನೋಂದಣಿ ಮಾಡಿಕೊಂಡಿವೆ, ನವೋದ್ಯಮಕ್ಕೆ ಗೈಡೆನ್ಸ್, ಪೈಲೆಟ್ ಹಾಗೂ ಫಂಡಿಂಗ್ ಬೇಕೆ ಬೇಕು. ಇದಕ್ಕೆ 50 ಲಕ್ಷ ರೂ. ಅನುದಾನದ ಅಗತ್ಯವಿದೆ. ಸಧ್ಯ ರಾಜ್ಯ ಸರಕಾರ ಒಟ್ಟು 1500 ಸ್ಟಾರ್ಟ್ ಅಪ್ ಗಳಿಗೆ ಈ ಅನುದಾನ ನೀಡಲು ತಯಾರಾಗಿದೆ.

ಬೆಂಗಳೂರು ಆಚೆಗೂ ಕೂಡಾ ಉದ್ಯಮ ಸ್ಥಾಪನೆಗೆ ಸರಕಾರ ಆದ್ಯತೆ ನೀಡುತ್ತಿದ್ದು 'ಬಿಯಾಂಡ್ ಬೆಂಗಳೂರು' ಕಾರ್ಯಕ್ರಮದಡಿ ಬೆಂಗಳೂರು ಹೊರತುಪಡಿಸಿ, ಮೈಸೂರು, ಮಂಗಳೂರು, ಹುಬ್ಬಳ್ಳಿ- ಧಾರವಾಡ, ಬೆಳಗಾವಿ, ಕಲಬುರಗಿ ಮುಂತಾದ ಜಿಲ್ಲೆಗಳಲ್ಲಿ ಉದ್ಯಮ ಸ್ಥಾಪನೆಗೆ ಪೂರಕವಾದ ವಾತಾವರಣ ನಿರ್ಮಿಸಲು ಹಾಗೂ ನವೋದ್ಯಮ ಸ್ಥಾಪನೆಗೆ ಮುಂದಾಗುವ ಸ್ಟಾರ್ಟ್ ಅಪ್ ಗಳಿಗೆ ಎಲ್ಲಾ ರೀತಿಯ ಸಹಕಾರ ನೀಡುತ್ತಿದೆ ಎಂದ ಸಚಿವರು ಟೈರ್ 2 ಹಾಗೂ 3 ನಗರಗಳ ಬೆಳವಣಿಗೆಗೆ ಹಾಗೂ ಉದ್ಯಮದ ಅಭಿವೃದ್ದಿಗೆ ಬೇಕಾಗುವ ಎಲ್ಲ ಕ್ರಮವಹಿಸಲು ಮುಂದಾಗಿದೆ ಎಂದರು.

ಮುಂಬರುವ ದಿನಗಳಲ್ಲಿನ ನವೋದ್ಯಮದ ಅಭಿವೃದ್ದಿಯನ್ನು ಪರಿಗಣಿಸಿ ಡೀಪ್ ಟೆಕ್ ಸ್ಟಾರ್ಟಅಪ್ ಪ್ರೋತ್ಸಾ ಹಕ್ಕಾಗಿ ಅನುದಾನ ನೀಡಲು ತಯಾರಿದ್ದು, ಮೈಸೂರಿನಲ್ಲಿ 402, ಮಂಗಳೂರಿನಲ್ಲಿ, 332, ಹುಬ್ಬಳ್ಳಿ- ಧಾರವಾಡ ಭಾಗದಲ್ಲಿ 463 ಹಾಗೂ ಕಕ ಭಾಗದಲ್ಲಿ 282 ಸ್ಟಾರ್ಟ್ ಅಪ್ ಗಳಿದ್ದು, ಇವುಗಳಿಗೆ ರೂ 1,000 ಕೋಟಿ ಅನುದಾನವನ್ನು ನೀಡಿ ಸರ್ಕಾರ ಪ್ರೋತ್ಸಾ ಹ ನೀಡುತ್ತಿದೆ. ಇದರಿಂದ ಟೈರ್ 2 ಹಾಗೂ 3 ನಗರಗಳಲ್ಲಿ ಯುವ ಉದ್ಯಮಗಳ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದರು.

ಐಐಐಟಿ ರಾಯಚೂರಿಗೆ ಹೋಗಿದ್ದು ಅಲ್ಲಿಗೆ ಅನುಕೂಲವಾಗುವಂತಹ ಉದ್ಯಮ ಸ್ಥಾಪನೆಗೆ ಬೇಕಾಗುವ ಮಾನವ ಸಂಪನ್ಮೂಲಗಳನ್ನು ಸೃಜಿಸಿ ಅವುಗಳನ್ನು ಒದಗಿಸಲು ಕೆಕೆ ಆರ್‌ಡಿಬಿಯಿಂದ ಅನುದಾನ ಒದಗಿಸುವಂತೆ ಸಚಿವರು ಡಾ ಅಜಯ್ ಸಿಂಗ್ ಅವರಿಗೆ ಮನವಿ ಮಾಡಿದರು.

ಕಲಬುರಗಿ ರೊಟ್ಟಿ ಬ್ರಾಂಡ್ ದೇಶದಾದ್ಯಂತ ಹೆಸರುವಾಸಿಯಾಗಿದ್ದು ಕೆನಡಾ, ಅಮೇರಿಕಾ ಸೇರಿದಂತೆ ವಿವಿಧ ದೇಶಗಳಿಗೆ ರಫ್ತಾಗುತ್ತಿವೆ. ಇತ್ತೀಚಿಗೆ ಪುಣೆ ಮೂಲದ ಕಂಪೆನಿಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದು ಕಲಬುರಗಿಯಲ್ಲಿ ಮಹಿಳಾ ಸಂಘಗಳಿಂದ ತಯಾರಿಸಲಾದ ರೊಟ್ಟಿಗಳನ್ನು ಕಳುಹಿಸಲು ಮೂರು ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ, ವರ್ಷವೊಂದಕ್ಕೆ 1 ಲಕ್ಷ ರೊಟ್ಟಿಗಳನ್ನು ಸರಬರಾಜು ಮಾಡಲಾಗುವುದು ಎಂದು ಹೇಳಿದ ಅವರು ಕಲಬುರಗಿ ಬ್ರಾಂಡ್ ರೊಟ್ಟಿಯ ಮೂಲಕ ಮಹಿಳಾ ಸಬಲೀಕರಣಕ್ಕೆ ಸರಕಾರ ಕೈಗೊಂಡ ಕ್ರಮಗಳ ಬಗ್ಗೆ ವಿವರಿಸಿದರು.

ಕೃಷಿ ವಲಯದ ಅಭಿವೃದ್ದಿ ಹಾಗೂ ಸಮಗ್ರ ಬೆಳವಣಿಗೆಗೆ ಸಹಕಾರಿಯಾಗುವಂತೆ ಕಲಬುರಗಿಯಲ್ಲಿ ಅಗ್ರಿಕಲ್ಚರ್ ಸೆಂಟರ್ ಆಫ್ ಎಕ್ಸ ಲೆನ್ಸ್ ಸ್ಥಾಪನೆಗೆ ಸರಕಾರ ಮುಂದಾಗಿದ್ದು ಕೃಷಿ ವಲಯಕ್ಕಾಗಿ ಇಂತಹ ಒಂದು ಎಕ್ಸ ಲೆನ್ಸ್ ಸ್ಥಾಪನೆ ಮಾಡಲು ಮುಂದಾಗಿದ್ದು ದೇಶದಲ್ಲೇ ಮೊದಲನೆಯದಾಗಲಿದೆ. ಇದು ಕೃಷಿ ವಲಯದ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದರು.

ಕೆಕೆಆರ್ ಡಿಬಿ ಅಧ್ಯಕ್ಷ ಹಾಗೂ ಶಾಸಕ ಡಾ ಅಜಯ್ ಸಿಂಗ್ ಮಾತನಾಡಿ, ಸರ್ಕಾರ, ಕೆಕೆಆರ್ ಡಿಬಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಉದ್ಯಮ ಸ್ಥಾಪನೆಗೆ ಪೂರಕ ವಾತವಾರಣ ನಿರ್ಮಾಣಕ್ಕೆ ಮುಂದಾಗಿದ್ದು, ಯುವ ಉದ್ಯಮಿಗಳನ್ನು ಉತ್ತೇಜಿಸಲು ಕೃಷಿಕಲ್ಪದೊಂದಿಗೆ ಒಗ್ಗೂಡಿ ಕೃಷಿಕಲ್ಪ ಸೆಂಟರ್ ಆಫ್ ಎಕ್ಸ ಲೆನ್ಸ್ () ಕಾರ್ಯಕ್ರಮ ರೂಪಿಸಿದೆ ಇವುಗಳ ಅಡಿಯಲ್ಲಿವಿಕಾಸ ಮತ್ತು ಪ್ರೇರಣಾ' ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ ಎಂದರು.

ಮುಂಬರುವ ಐದು ಅಥವಾ ಹತ್ತು ವರ್ಷದಲ್ಲಿ ಈ ಭಾಗಕ್ಕೆ ನೀಡಬೇಕಾದ ಅನುದಾನದ ಬಗ್ಗೆ ಅಗತ್ಯ ಕ್ರಮವಹಿಸಲಾಗುತ್ತಿದೆ. ಗೋವಿಂದ್ ರಾವ್ ವರದಿಯಂತೆ ಈ ಭಾಗಕ್ಕೆ ಹೆಚ್ಚಿನ ಅನುದಾನ ಒದಗಿಸಲಾಗುವುದು. ಕೃಷಿ ಕಲ್ಪಕ್ಕೆ ಕೆಕೆಆರ್ ಡಿಬಿ ಬೆನ್ನೆಲುಬಾಗಿ ನಿಂತು ಈ ಭಾಗದಲ್ಲಿ ಉದ್ಯಮ ಬೆಳವಣಿಗೆಗೆ ಎಲ್ಲ ಅಗತ್ಯ ಸಹಕಾರ ನೀಡಲು ಬದ್ಧವಾಗಿದೆ ಎಂದರು.

ವೇದಿಕೆ ಮೇಲೆ ಕೆಕೆಆರ್‌ಡಿಬಿ ಅಧ್ಯಕ್ಷ ಡಾ ಅಜಯ್ ಸಿಂಗ್, ಶಾಸಕರಾದ ಎಂ ವೈ ಪಾಟೀಲ್, ಅಲ್ಲಮಪ್ರಭು ಪಾಟೀಲ್, ಎಂ ಎಲ್ ಸಿ ಜಗದೇವ ಗುತ್ತೇದಾರ, ಚಂದ್ರಿಕಾ ಪರಮೇಶ್ವರ, ಅರುಣ್ ಕುಮಾರ್ ಎಂ ವೈ ಪಾಟೀಲ, ಪ್ರವೀಣ್ ಹರವಾಳ, ಜಿಲ್ಲಾಧಿಕಾರಿ ಮೊಹಮ್ಮದ್ ಇಕ್ರಮುಲ್ಲಾ ಷರೀಫ್, ಸಿಇಒ ಭಂವರ್ ಸಿಂಗ್ ಮೀನಾ, ಕಮೀಷನರ್ ಡಾ ಶರಣಪ್ಪ ಢಗೆ, ಮಹಾನಗರ ಪಾಲಿಕೆ ಕಮಿಷನರ್ ಅವಿನಾಶ ಶಿಂಧೆ, ಎಸ್ ಪಿ ಅಡ್ಡೂರು ಶ್ರೀನಿವಾಸಲು, ಎಡಿಸಿ ರಾಯಪ್ಪ ಹುಣಸಗಿ, ಎಸಿ ಸಾಹಿತ್ಯ, ಕೃಷಿಕಲ್ಪದ ಸಿಇಒ ಸಿಎಂ ಪಾಟೀಲ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವನ್ಯಜೀವಿಗಳಿಂದ ನಿರ್ದಿಷ್ಟ ಅಂತರ ಕಾಯ್ದುಕೊಳ್ಳಬೇಕು: ಸಚಿವ ಈಶ್ವರ್ ಖಂಡ್ರೆ



ಕಲಬುರಗಿ, ಮೇ 18:

ಕೊಡಗು ಜಿಲ್ಲೆ ದುಬಾರೆ ಶಿಬಿರದಲ್ಲಿ ಎರಡು ಸಾಕಾನೆಗಳ ಕಾದಾಟದ ವೇಳೆ ಅನಿರೀಕ್ಷಿತವಾಗಿ ಆಯತಪ್ಪಿ ಬಿದ್ದ ಆನೆಯ ಕೆಳಗೆ ಸಿಲುಕಿ ಮಹಿಳೆಯೊಬ್ಬರು ಮೃತಪಟ್ಟಿದ್ದು, ಇದು ಆಘಾತಕರ ಘಟನೆಯಾಗಿದೆ ಎಂದು ಅರಣ್ಯ ಸಚಿವ ಈಶ್ವರ್ ಬಿ. ಖಂಡ್ರೆ ಸಂತಾಪ ಸೂಚಿಸಿದ್ದಾರೆ.

ಈ ಸಂಬಂಧ ಪ್ರತಿಕ್ರಿಯೆ ನೀಡಿರುವ ಈಶ್ವರ್ ಬಿ. ಖಂಡ್ರೆ, ಆನೆಗಳನ್ನು ಸ್ನಾನ ಮಾಡಿಸುವಾಗ ನದಿಯ ಬಳಿ ನಿಂತು ನೋಡುತ್ತಿದ್ದ ತಮಿಳುನಾಡಿನ 33 ವರ್ಷದ ಪ್ರವಾಸಿ ಮಹಿಳೆ ತುಳಸಿ ಎಂಬವರು ಈ ಮೃತಪಟ್ಟಿದ್ದಾರೆಂದು ಅಧಿಕಾರಿಗಳು ತಮಗೆ ತಿಳಿಸಿದ್ದು, ಇದು ನೋವಿನ ಸಂಗತಿ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ, ಈ ನೋವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ದೇವರು ನೀಡಲಿ ಎಂದು ಹೇಳಿದ್ದಾರೆ.

ಸಾಕಾನೆಗಳಾದ ಕಂಚನ್ ಮತ್ತು ಮಾರ್ತಾಂಡ ಆನೆಗಳು ಸ್ನಾನ ಮಾಡಿಸುತ್ತಿದ್ದ ವೇಳೆ ಪರಸ್ಪರ ಕಾದಾಟ ನಡೆಸಿದ್ದು, ಮಾವುತರು ನಿಯಂತ್ರಿಸುತ್ತಿದ್ದರೂ ಮುನ್ನುಗ್ಗಿದ ಕಂಜನ್ ಆನೆ, ಮಾರ್ತಾಂಡ ಆನೆಗೆ ಗುದ್ದಿದ ಪರಿಣಾಮ ಮಾರ್ತಾಂಡ ಆನೆ ಆಯತಪ್ಪಿ ಕೆಳಗೆ ಬಿದ್ದಿದೆ. ಈ ವೇಳೆ ಮಹಿಳೆ ಆನೆಯ ಕೆಳಗೆ ಸಿಲುಕಿ ಮೃತಪಟ್ಟಿದ್ದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಇದು ಯಾರೂ ಊಹಿಸದಂತಹ ಘಟನೆಯಾಗಿದ್ದು, ಈ ಬಗ್ಗೆ ಸಮಗ್ರ ತನಿಖೆ ನಡೆಸಿ, ಇಂತಹ ಅಚಾತುರ್ಯಗಳು ಆಗದ ರೀತಿಯಲ್ಲಿ ಕ್ರಮ ವಹಿಸಲು ಸೂಚಿಸಿದ್ದೇನೆ ಎಂದು ಅವರು ತಿಳಿಸಿದ್ದಾರೆ.

ಆನೆಗಳು ಸೇರಿದಂತೆ ವನ್ಯಜೀವಿಗಳನ್ನು ಪಳಗಿಸಿದ್ದರೂ, ಪ್ರಾಣಿಗಳ ಸ್ವಭಾವವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ಅವು ಯಾವಾಗ ಯಾವ ರೀತಿ ವರ್ತಿಸುತ್ತವೆಂದು ಊಹಿಸುವುದೂ ಕಷ್ಟವಾಗುತ್ತದೆ. ಹೀಗಾಗಿ ಆನೆಗಳ ಸೊಂಡಿಲು ಮುಟ್ಟುವುದು, ಪಕ್ಕದಲ್ಲಿ ನಿಂತು ಫೋಟೋ ತೆಗೆಸಿಕೊಳ್ಳುವುದು, ಆನೆ ಮೈತೊಳೆಯಲು ಅವಕಾಶ ನೀಡುವುದು, ಬೆಲ್ಲ, ಬಾಳೆಹಣ್ಣು ತಿನ್ನಿಸುವುದನ್ನು ನಿರ್ಬಂಧಿಸಬೇಕು. ಅಲ್ಲದೆ, ವನ್ಯಜೀವಿಗಳಿಂದ ಪ್ರವಾಸಿಗರು ನಿರ್ದಿಷ್ಟ ಅಂತರ ಕಾಯ್ದುಕೊಳ್ಳಲು ಕ್ರಮ ಕೈಗೊಳ್ಳಬೇಕು ಎಂದು ಈಶ್ವರ ಖಂಡ್ರೆ ಸೂಚಿಸಿದ್ದಾರೆ.

ಚರಿತ್ರೆ ಅರಿಯಲು ವಸ್ತುಸಂಗ್ರಹಾಲಯಗಳು ಸಹಕಾರಿ: ಟಿ.ಜಿ.ವಿಠ್ಠಲ



ಬಳ್ಳಾರಿ,ಮೇ 20-

ಚರಿತ್ರೆಯನ್ನು ಸುಲಭವಾಗಿ ಅರ್ಥೈಸಿಕೊಳ್ಳಲು ಮತ್ತು ಅರಿಯಲು ವಸ್ತುಸಂಗ್ರಹಾಲಯಗಳು ಅತ್ಯಂತ ಸಹಕಾರಿಯಾಗಿವೆ ಎಂದು ಗಾಂಧಿ ಭವನ ಹಾಗೂ ಮಲ್ಲಸಜ್ಜನ ವ್ಯಾಯಾಮ ಶಾಲೆಯ ಕಾರ್ಯದರ್ಶಿ ಟಿ.ಜಿ. ವಿಠ್ಠಲ ಅವರು ಅಭಿಪ್ರಾಯಪಟ್ಟರು.

ನಗರದ ರಾಬರ್ಟ್ ಬ್ರೂಸ್ ಫುಟ್ ಸಂಗನಕಲ್ಲು ಪ್ರಾಕ್ತನ ವಸ್ತುಸಂಗ್ರಹಾಲಯದಲ್ಲಿ ಸೋಮವಾರ ಆಯೋಜಿಸಲಾಗಿದ್ದ ಅಂತಾರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇತಿಹಾಸದ ಆಸಕ್ತರು ಪಠ್ಯಪುಸ್ತಕಗಳನ್ನು ಓದುವುದು ಮತ್ತು ಪಳೆಯುಳಿಕೆಗಳ ಚಿತ್ರಗಳನ್ನು ನೋಡುವುದು ಅನಿವಾರ್ಯವಿರಬಹುದು. ಆದರೆ ವಸ್ತುಸಂಗ್ರಹಾಲಯಕ್ಕೆ ನೇರವಾಗಿ ಭೇಟಿ ನೀಡಿದಾಗ, ಇತಿಹಾಸದ ಕುರುಹುಗಳನ್ನು ಸಾಕ್ಷಾತ್ ಕಣ್ಣಾರೆ ನೋಡಿ ಮಾಹಿತಿ ಪಡೆದುಕೊಳ್ಳುವ ಅನುಭವವೇ ಬೇರೆಯಾಗಿರುತ್ತದೆ ಎಂದು ತಿಳಿಸಿದರು.

ಕೃಷಿ ಇಲಾಖೆಯ ನಿವೃತ್ತ ಅಧಿಕಾರಿ ಮಹಾಬಳೇಶ್ವರಪ್ಪ ಅವರು ಮಾತನಾಡಿ, ವಸ್ತುಸಂಗ್ರಹಾಲಯಗಳ ಮೂಲಕ ಸಾವಿರಾರು ವರ್ಷಗಳ ಹಿಂದಿನ ಮಾನವನ ಜನಜೀವನ ಮತ್ತು ಆಹಾರ ಪದ್ಧತಿಯ ಬಗ್ಗೆ ವಿವರವಾದ ಮಾಹಿತಿ ಪಡೆಯಬಹುದು. ನಮ್ಮ ಭಾಗದ ಊರುಗಳ ಹೆಸರುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಅವು ಅಂದು ಬೆಳೆದ ದವಸ-ಧಾನ್ಯಗಳು ಹಾಗೂ ಸಗಣಿ ಸುಟ್ಟ ಬೂದಿಯ ದಿಬ್ಬಗಳ ಹಿನ್ನೆಲೆಯನ್ನು ಅವಲಂಬಿಸಿ ಇಟ್ಟಿರುವುದು ತಿಳಿಯುತ್ತದೆ ಎಂದು ವಿವರಿಸಿದರು.

ರುಕ್ಮಿಣಿಯಮ್ಮ ಚೆಂಗರೆಡ್ಡಿ ಸ್ಮಾರಕ ಸರ್ಕಾರಿ ವಾಣಿಜ್ಯ ಹಾಗೂ ಮ್ಯಾನೇಜ್ಮೆಂಟ್ ಕಾಲೇಜಿನ ಉಪನ್ಯಾಸಕ ಒಬ್ಬಯ್ಯ ಅವರು ಮಾತನಾಡಿ, ಯುವಕರು ಮತ್ತು ವಿದ್ಯಾರ್ಥಿಗಳು ತಮ್ಮ ಬಿಡುವಿನ ವೇಳೆಯಲ್ಲಿ ತಮ್ಮ ಊರುಗಳ ಸುತ್ತಮುತ್ತ ಚಾರಣ ಕೈಗೊಂಡರೆ ಇತಿಹಾಸದ ಹೊಸ ಕುರುಹುಗಳನ್ನು ಪತ್ತೆಹಚ್ಚಲು ಸಾಧ್ಯವಾಗುತ್ತದೆ ಎಂದರು.

ವಸ್ತುಸಂಗ್ರಹಾಲಯದ ತಾಂತ್ರಿಕ ಸಹಾಯಕಿ ಗೌರಿ ಅವರು ಮಾತನಾಡಿ, ಬಳ್ಳಾರಿಯಲ್ಲಿರುವ ಈ ವಸ್ತುಸಂಗ್ರಹಾಲಯವು ಇಡೀ ಭಾರತದಲ್ಲೇ ಪ್ರಾಗೈತಿಹಾಸಿಕ ಕಾಲಕ್ಕೆ ಮೀಸಲಿಟ್ಟ ಏಕೈಕ ವಿಶಿಷ್ಟ ವಸ್ತುಸಂಗ್ರಹಾಲಯವಾಗಿದೆ. ಇದು ಇತಿಹಾಸದ ಕುರಿತು ಹೆಚ್ಚಿನ ಸಂಶೋಧನೆ ಹಾಗೂ ಅಧ್ಯಯನ ಮಾಡಲು ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶ ಕಲ್ಪಿಸಿಕೊಟ್ಟಿದೆ ಎಂದು ತಿಳಿಸಿದರು. ಇದೇ ವೇಳೆ ಕಲ್ಬುರ್ಗಿಯ ಕೇಂದ್ರೀಯ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿನಿಯರಾದ ರೋಹಿಣಿ ಮತ್ತು ಅಶ್ವಿನಿ ಅವರು ಉನ್ನತ ಸಂಶೋಧನೆಗಳಲ್ಲಿ ವಸ್ತುಸಂಗ್ರಹಾಲಯಗಳ ಪಾತ್ರದ ಕುರಿತು ಬೆಳಕು ಚೆಲ್ಲಿದರು.

ಕಾರ್ಯಕ್ರಮದಲ್ಲಿ ವಸ್ತುಸಂಗ್ರಹಾಲಯ ಸಮಿತಿ ಸದಸ್ಯ ಎಂ.ಅಹಿರಾಜ ಅವರು ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಈ ವೇಳೆ ಶ್ರೀಮತಿ ಸರಳಾದೇವಿ ಸತೀಶ್ಚಂದ್ರ ಅಗರ್ವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ರುಕ್ಮಿಣಿಯಮ್ಮ ಚೆಂಗರೆಡ್ಡಿ ಸ್ಮಾರಕ ಕಾಲೇಜಿನ ಉಪನ್ಯಾಸಕರು ಮತ್ತು ನೂರಾರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವಿವಿಧ ಬೇಡಿಕೆಗಳ ಈಡೇರಿಕೆ ಆಗ್ರಹಿಸಿ ಬ್ಯಾಂಕ್ ನೌಕರರಿಂದ ಸಾಂಕೇತಿಕ ಧರಣಿ



ಕಲಬುರಗಿ,ಮೇ.20-

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಆಲ್ ಇಂಡಿಯಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸ್ಟಾಫ್ ಫೆಡರೇಶನ್ ವತಿಯಿಂದ ಮೇ 25 ಮತ್ತು 26ರಂದು ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಕರೆ ನೀಡಲಾಗಿದ್ದು, ಈ ನಿಮಿತ್ತ ಸೂಪರ್ ಮಾರ್ಕೆಟ್ ನ ಎಸ್‌ಬಿಐ ಕಚೇರಿ ಎದುರು ಬ್ಯಾಂಕ್ ನೌಕರರು ಸಾಂಕೇತಿಕ ಧರಣಿ ನಡೆಸಿದರು.

ಫೆಡರೇಶನ್ ಹಲವು ವರ್ಷಗಳಿಂದ ಎಸ್‌ಬಿಐ ಆಡಳಿತ ಮಂಡಳಿಯೊಂದಿಗೆ ಸಂವಾದ ಹಾಗೂ ಮನವೊಲಿಕೆ ಮೂಲಕ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತಿದ್ದರೂ, ನಿರ್ವಹಣೆಯ ನಿರ್ಲಕ್ಷ್ಯ ಧೋರಣೆಯಿಂದ ಮುಷ್ಕರ ಅನಿವಾರ್ಯವಾಗಿದೆ ಎಂದು ಸಂಘಟನೆಯ ಮುಖಂಡರು ಆರೋಪಿಸಿದರು. ನೌಕರರ ಪ್ರಮುಖ ಬೇಡಿಕೆಗಳಲ್ಲಿ ಮೆಸೆಂಜರ್ ಹಾಗೂ ಶಸ್ತ್ರಸಜ್ಜಿತ ರಕ್ಷಕರ ತಕ್ಷಣದ ನೇಮಕಾತಿ, 2019ರಿಂದ ಸೇವೆಗೆ ಸೇರಿದ ನೌಕರರಿಗೆ ವರ್ಗಾವಣೆ ಜಾರಿ, ಶಾಶ್ವತ ಹುದ್ದೆಗಳ ಔಟ್‌ಸೋರ್ಸಿಂಗ್ ಸ್ಥಗಿತ, ವೇತನ ಸಮಾನತೆ ಸಮಸ್ಯೆ ಪರಿಹಾರ, ಒಳಪಡುವ ನೌಕರರಿಗೆ ಪಿಂಚಣಿ ನಿಧಿ ನಿರ್ವಹಣೆಯಲ್ಲಿ ಆಯ್ಕೆ ಅವಕಾಶ, ಸಮರ್ಪಕ ಸಿಬ್ಬಂದಿ ನೇಮಕಾತಿ ಹಾಗೂ ವೈದ್ಯಕೀಯ ಮರುಪಾವತಿ ಯೋಜನೆಯಲ್ಲಿ ಸುಧಾರಣೆಗಳನ್ನು ಒಳಗೊಂಡಿವೆ.

ಬ್ಯಾಂಕ್ ನೌಕರರ ಹೋರಾಟ ನ್ಯಾಯಸಮ್ಮತವಾಗಿದ್ದು, ಸಾರ್ವಜನಿಕರು ಹಾಗೂ ಗ್ರಾಹಕರು ಮುಷ್ಕರಕ್ಕೆ ಬೆಂಬಲ ನೀಡಬೇಕು ಎಂದು ಸ್ಟೇಟ್ ಬ್ಯಾಂಕ್ ಸ್ಟಾಫ್ ಯೂನಿಯನ್ ಮನವಿ ಮಾಡಿದೆ.

ಧರಣಿಯಲ್ಲಿ ಉಪ ಪ್ರಧಾನ ಕಾರ್ಯದರ್ಶಿ ನವೀನ ಕಾಗಲ್ಕರ, ಸಹಾಯಕ ಪ್ರಧಾನ ಕಾರ್ಯದರ್ಶಿಗಳಾದ ಗೋಪಾಲ ಕೃಷ್ಣ ಜೋಶಿ, ರಾಘವೇಂದ್ರ, ಕುಲಕರ್ಣಿ, ರೀಟಾ ರಾಥೋಡ್, ಟಿ.ಸುಬ್ಬಯ್ಯ, ರವಿ ಚಂದ್ರ , ಮಲ್ಲರಾವು ಕುಲಕ ರ್ಣಿ ಸೇರಿ ಹಲವರು ಭಾಗವಹಿಸಿದ್ದರು.

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ಎಸ್‌ಐಒ ಪ್ರತಿಭಟನೆ



ಕಲಬುರಗಿ,ಮೇ.20- ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣವನ್ನು ಖಂಡಿಸಿ ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಸೇಶನ್ ಆಫ್ ಇಂಡಿಯಾ (ಎಸ್‌ಐಒ) ಕಲಬುರಗಿ ಘಟಕದ ಪದಾಧಿಕಾರಿಗಳು ಮತ್ತು ವಿದ್ಯಾರ್ಥಿಗಳು ಸೋಮವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.


ಪರೀಕ್ಷಾ ವ್ಯವಸ್ಥೆಯ ಪಾರದರ್ಶಕತೆ ಹಾಗೂ ವಿಶ್ವಾಸಾರ್ಹತೆಗೆ ಧಕ್ಕೆಯುಂಟುಮಾಡಿರುವ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಕುರಿತು ತೀವ್ರ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕು ಹಾಗೂ ಘಟನೆಗೆ ಕಾರಣರಾದ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯ ಬಳಿಕ ಜಿಲ್ಲಾಧಿಕಾರಿಗಳ ಮೂಲಕ ಸರಕಾರಕ್ಕೆ ಮನವಿ ಪತ್ರ ಸಲ್ಲಿಸಲಾಯಿತು. ಈ ವೇಳೆ ಮಾತನಾಡಿದ ಸಂಘಟನೆಯ ಮುಖಂಡರು, ನೀಟ್‌ನಂತಹ ರಾಷ್ಟ್ರೀಯ ಮಟ್ಟದ ಪರೀಕ್ಷೆಗಳಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಸಂಭವಿಸುವುದು ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಪರೀಕ್ಷಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನಂಬಿಕೆ ಉಳಿಯಬೇಕಾದರೆ ಇಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ನೀಟ್ ಪರೀಕ್ಷೆಯಲ್ಲಿ ಅಕ್ರಮ: ಶಿಕ್ಷಣ ವ್ಯವಸ್ಥೆಯ ಮೇಲೆ ನಡೆದ ಭಯೋತ್ಪಾದನಾ ದಾಳಿ




ನೀಟ್‌ನಲ್ಲಿ ನಡೆದ ಹಗರಣ ಈ ದೇಶದ ಶಿಕ್ಷಣ ವ್ಯವಸ್ಥೆಯ ಮೇಲೆ ನಡೆದ ಉಗ್ರಗಾಮಿ ದಾಳಿಯಾಗಿದೆ. ಈ ಸೋರಿಕೆ ಯಾವುದೇ ಅಣು ಸ್ಥಾವರದ ವಿಕಿರಣಗಳ ಸೋರಿಕೆಗಳಷ್ಟೇ ಅಪಾಯಕಾರಿಯಾದುದು. ಒಂದು ಪರೀಕ್ಷೆಯ ಯಶಸ್ಸು ಅಥವಾ ವೈಫಲ್ಯಗಳಿಗಷ್ಟೇ ಈ ಸೋರಿಕೆ ಸೀಮಿತವಲ್ಲ. ನೀಟ್‌ನಲ್ಲಿ ನಡೆಯುವ ಯಾವುದೇ ಅಕ್ರಮಗಳು ಈ ದೇಶದ ವೈದ್ಯಕೀಯ ಸೇವೆಯಲ್ಲಿ ಅತ್ಯಂತ ಗಂಭೀರ ಪರಿಣಾಮವನ್ನು ಬೀರುತ್ತದೆ. ವೈದ್ಯರಾಗುವುದಕ್ಕೆ ನಿಜವಾಗಿಯೂ ಅರ್ಹತೆಯಿರುವ ನೂರಾರು ವಿದ್ಯಾರ್ಥಿಗಳ ಅವಕಾಶವನ್ನು ಈ ಸೋರಿಕೆ ಕಿತ್ತುಕೊಂಡಿದೆ ಮಾತ್ರವಲ್ಲ, ವೈದ್ಯಕೀಯ ಕ್ಷೇತ್ರವನ್ನು ಪ್ರವೇಶಿಸಲು ಯಾವ ಅರ್ಹತೆಯೂ ಇಲ್ಲದ ಅಭ್ಯರ್ಥಿಗಳ ಕೈಗೆ ವೈದ್ಯಕೀಯ ಕತ್ತರಿಯನ್ನು ನೀಡಿದೆ. ಇಂತಹ ಅಭ್ಯರ್ಥಿಗಳು ಭವಿಷ್ಯದಲ್ಲಿ ವೈದ್ಯರಾಗಿ ಬಂದರೆ ಈ ದೇಶದ ವೈದ್ಯಕೀಯ ಕ್ಷೇತ್ರದ ಸ್ಥಿತಿಯೇನಾಗಬೇಕು? ಈ ಹಿಂದಿನ ಹಲವು ಪರೀಕ್ಷೆಗಳಲ್ಲಿ ಸೋರಿಕೆ ನಡೆದಿಲ್ಲ ಎಂದಾಕ್ಷಣ, ಅಲ್ಲಿ ಅಕ್ರಮಗಳು ನಡೆದೇ ಇಲ್ಲ ಎಂದು ಹೇಳುವಂತಿಲ್ಲ. ಅಕ್ರಮಗಳು ಬೆಳಕಿಗೆ ಬರುವುದು ಆಕಸ್ಮಿಕವಾಗಿ. ಆರೋಪಿಗಳು ಮಾಡುವ ಎಡವಟ್ಟುಗಳಿಂದ. ಕೆಲವೊಮ್ಮೆ ಅಕ್ರಮಗಳು ಬಯಲಾಗುವುದೇ ಇಲ್ಲ. ಇಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ, ಶಿಕ್ಷಣ ವ್ಯವಸ್ಥೆಗೆ, ವೈದ್ಯಕೀಯ ಕ್ಷೇತ್ರಕ್ಕೆ ಆಗುವ ಭಾರೀ ಅನ್ಯಾಯ ಯಾರ ಗಮನಕ್ಕೂ ಬರುವುದಿಲ್ಲ. 2024ರಲ್ಲಿ ನೀಟ್‌ನಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವ ಅನುಮಾನ ಬಂದಿರುವುದು ಫಲಿತಾಂಶ ಹೊರ ಬಿದ್ದ ಬಳಿಕ. ಸುಮಾರು 67 ಮಂದಿಗೆ ಆ ಬಾರಿ ಪ್ರಥಮ ರ್ಯಾಂಕ್ ಬಂದಾಗ ಪ್ರಶ್ನೆ ಪತ್ರಿಕೆಯಲ್ಲಿ ಅಕ್ರಮಗಳು ನಡೆದಿರುವ ಬಗ್ಗೆ ಅನುಮಾನ ವ್ಯಕ್ತವಾಯಿತು. 67 ಮಂದಿಯಲ್ಲಿ ಆರು ಮಂದಿ ಒಂದೇ ಅನುಕ್ರಮದ ಸೀಟ್ ಸಂಖ್ಯೆಗಳನ್ನು ಹೊಂದಿರುವುದು ಬಳಿಕ ಬೆಳಕಿಗೆ ಬಂತು. ಅಂದರೆ, ಅಂಕಗಳಲ್ಲಿ ಸಣ್ಣ ಪುಟ್ಟ ಏರುಪೇರುಗಳು ಆಗಿದ್ದರೆ 2024ರಲ್ಲಿ ಆದ ಸೋರಿಕೆ ಚರ್ಚೆಗೇ ಬರುತ್ತಿರಲಿಲ್ಲ. ಇದೇ ರೀತಿ ಅಕ್ರಮಗಳು ನಡೆದು ಚರ್ಚೆಗೆ ಬರದ ಪರೀಕ್ಷೆಗಳನ್ನು ಸರಕಾರ ಎಷ್ಟು ಸಾರಿ ನಡೆಸಿದೆ ಎನ್ನುವುದು ಗೊತ್ತಾಗುವುದಾದರೂ ಹೇಗೆ?

ನೀಟ್ ಪರೀಕ್ಷೆಯ ಅಕ್ರಮ ಈಗಾಗಲೇ ತನ್ನ ಪರಿಣಾಮವನ್ನು ಶಿಕ್ಷಣ ವ್ಯವಸ್ಥೆಯಲ್ಲಿ ಬೀರಿ ಆಗಿದೆ. ವಿದ್ಯಾರ್ಥಿಗಳಿಗೆ ಪರೀಕ್ಷೆಯ ಮೇಲಿರುವ ವಿಶ್ವಾಸವೇ ಹೋಗಿ ಬಿಟ್ಟಿದೆ. ನೊಂದ ಒಬ್ಬ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆಯೂ ನಡೆದಿದೆ. ಇದು ಆತ್ಮಹತ್ಯೆಯಲ್ಲ, ವ್ಯವಸ್ಥೆ ಮಾಡಿದ ಕೊಲೆ ಎಂದು ಕಾಂಗ್ರೆಸ್‌ನ ಮುಖಂಡ ರಾಹುಲ್ ಗಾಂಧಿ ಕಿಡಿಕಾರಿದ್ದಾರೆ. ಈ ಆತ್ಮಹತ್ಯೆ ಒಂದು ಆರಂಭ ಮಾತ್ರ. ನೀಟ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ವಿದ್ಯಾರ್ಥಿಗಳ ಮನಸ್ಥಿತಿ ಹೇಗಿರುತ್ತದೆ ಎನ್ನುವುದನ್ನು ಪ್ರತ್ಯೇಕವಾಗಿ ವಿವರಿಸಬೇಕಾಗಿಲ್ಲ. ಮಾನಸಿಕವಾಗಿ, ದೈಹಿಕವಾಗಿ ಭಾರೀ ಒತ್ತಡಗಳನ್ನು ಅವರು ಎದುರಿಸಬೇಕಾಗುತ್ತದೆ. ಇಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ವಿದ್ಯಾರ್ಥಿಗಳನ್ನು ತರಬೇತಿಗೊಳಿಸುವ ಸಂಸ್ಥೆಗಳೂ ಅವರನ್ನು ಸಾಕಷ್ಟು ಶೋಷಣೆಗೀಡು ಮಾಡುತ್ತವೆ. ಅವೆಲ್ಲದರಿಂದ ಪಾರಾಗಿ ಪರೀಕ್ಷೆ ಬರೆದು ಹೊರಬಂದರೆ, ಇದೀಗ ಸೋರಿಕೆಯ ಭಯ. ಮುಂದಿನ ದಿನಗಳಲ್ಲಾದರೂ ತಾವು ಬರೆಯುವ ಪರೀಕ್ಷೆ ವಿಶ್ವಾಸಾರ್ಹತೆಯಿಂದ ಕೂಡಿರುತ್ತದೆ ಎಂದು ಅವರು ನಂಬುವುದು ಹೇಗೆ? ಹಾಗೆ ನಂಬುವುದಕ್ಕೆ ಬೇಕಾಗಿರುವ ಯಾವ ಭರವಸೆಗಳನ್ನು ಕೇಂದ್ರ ಸರಕಾರ ನೀಡಿದೆ?

ಶಿಕ್ಷಣ ವ್ಯವಸ್ಥೆಯ ಮೇಲೆ ನಡೆದ ಈ ದಾಳಿ, ಪರಿಣಾಮವಾಗಿ ವಿದ್ಯಾರ್ಥಿಗಳಲ್ಲಿ ಸೃಷ್ಟಿಯಾಗಿರುವ ಭಯ ಇವೆಲ್ಲವುಗಳಿಗೆ ಸರಕಾರ ನೇರ ಹೊಣೆಯಾಗಿದೆ. ತಪ್ಪು ನಡೆದಿದೆ ಎನ್ನುವುದನ್ನು ಸರಕಾರ ಒಪ್ಪಿಕೊಂಡಿದೆಯಾದರೂ, ಆ ತಪ್ಪಿಗಾಗಿ ಸರಕಾರದೊಳಗಿರುವ ಯಾವುದೇ ಉನ್ನತ ವ್ಯಕ್ತಿಯ ತಲೆದಂಡವಾಗಿಲ್ಲ. ಅಕ್ರಮ ಬೆಳಕಿಗೆ ಬಂದ ಬೆನ್ನಿಗೇ ಕೇಂದ್ರ ಸಚಿವ ನೈತಿಕ ಹೊಣೆ ಹೊತ್ತು ರಾಜೀನಾಮೆಯನ್ನು ನೀಡಬೇಕಾಗಿತ್ತು. ಈ ಸೋರಿಕೆಯನ್ನು ತಾನು ಎಷ್ಟು ಗಂಭೀರವಾಗಿ ತೆಗೆದುಕೊಂಡಿದ್ದೇನೆ ಎನ್ನುವುದನ್ನು ಆ ರಾಜೀನಾಮೆ ದೇಶಕ್ಕೆ ವ್ಯಕ್ತಪಡಿಸುತ್ತಿತ್ತು. ಪ್ರಕರಣಕ್ಕೆ ಸಂಬಂಧಿಸಿ ಕೇಂದ್ರ ಶಿಕ್ಷಣ ಸಚಿವರು ರಾಜೀನಾಮೆ ನೀಡಲೇ ಬೇಕಾದ ಹಲವು ಅನಿವಾರ್ಯಗಳಿತ್ತು. ಮುಖ್ಯವಾಗಿ ಪರೀಕ್ಷೆ ನಡೆಸುವ ಹಕ್ಕನ್ನು ಕೇಂದ್ರ ಸರಕಾರ ರಾಜ್ಯಗಳಿಂದ ಕಿತ್ತುಕೊಂಡು, ತಾನು ಎಲ್ಲ ವಿದ್ಯಾರ್ಥಿಗಳಿಗೂ ನ್ಯಾಯವನ್ನು ನೀಡುತ್ತೇನೆ ಎಂದು ನೀಟ್ ಪರೀಕ್ಷೆಯನ್ನು ರೂಪಿಸಿತು. ಇದರಿಂದ ಸ್ಥಳೀಯ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ ಎಂದು ಹಲವು ರಾಜ್ಯಗಳು ಈ ಪರೀಕ್ಷೆಯನ್ನು ವಿರೋಧಿಸಿದವು. ಮಾತ್ರವಲ್ಲ, ಇದರ ವಿರುದ್ಧ ನಿರ್ಣಯವನ್ನೂ ಮಾಡಿದ್ದವು. ಈ ಹಿನ್ನೆಲೆಯಲ್ಲಿ ಈ ಪರೀಕ್ಷೆಯನ್ನು ಜವಾಬ್ದಾರಿಯುತವಾಗಿ ನಡೆಸುವ ಹೊಣೆಗಾರಿಕೆ ಕೇಂದ್ರ ಸರಕಾರದ್ದಾಗಿತ್ತು. ದೇಶದ ಎಲ್ಲ ವಿದ್ಯಾರ್ಥಿಗಳಿಗೆ ಈ ನೀಟ್ ಮೂಲಕ ನ್ಯಾಯವನ್ನು ನೀಡುವುದು ಪಕ್ಕಕ್ಕಿರಲಿ, ಕನಿಷ್ಠ ಅಕ್ರಮಗಳಿಲ್ಲದೆ ಪರೀಕ್ಷೆಯನ್ನು ಮಾಡುವುದಕ್ಕೂ ಕೇಂದ್ರ ಸರಕಾರ ವಿಫಲವಾಗುತ್ತಾ ಬಂದಿದೆ. ಇದರಿಂದ ವಿದ್ಯಾರ್ಥಿಗಳಿಗೆ ಮತ್ತು ರಾಜ್ಯಗಳಿಗೆ ಆಗಿರುವ ಅನ್ಯಾಯದ ಹೊಣೆಯನ್ನು ಕೇಂದ್ರ ಸರಕಾರ ಹೊರಲೇ ಬೇಕಾಗಿದೆ.

ಇದರಲ್ಲಿ ಸರಕಾರದೊಳಗಿರುವ ರಾಜಕಾರಣಿಗಳ ನೇರ ಪಾತ್ರವಿದೆ ಎಂದು ಅನುಮಾನಿಸಲಾಗುತ್ತಿದೆ. ಅದಕ್ಕೂ ಕಾರಣಗಳಿವೆ. ಈ ಪ್ರಕರಣದಲ್ಲಿ ಸಿಕ್ಕಿ ಬಿದ್ದ ಪ್ರಮುಖ ಆರೋಪಿಗಳಿಗೆ ಬಿಜೆಪಿಯೊಂದಿಗೆ ನೇರ ಸಂಬಂಧವಿದೆ. ಬಿಜೆಪಿಯ ನಾಯಕರೊಂದಿಗೆ ನಂಟನ್ನೂ ಹೊಂದಿದ್ದಾರೆ. ಅಂದರೆ ಸರಕಾರದೊಳಗಿರುವ ಜನರ ಸಹಾಯವಿಲ್ಲದೆ ಈ ಸೋರಿಕೆ ಸಾಧ್ಯವೇ ಇಲ್ಲ ಎಂದಾಯಿತು. 2024ರಲ್ಲಿ ನೀಟ್ ಪರೀಕ್ಷೆಯಲ್ಲಿ ಅಕ್ರಮ ನಡೆದಾಗ ಅದನ್ನು ಗಂಭೀರವಾಗಿ ತೆಗೆದುಕೊಂಡಿದ್ದರೆ, ಸಂಬಂಧ ಪಟ್ಟ ಸಚಿವರು ಆಗ ರಾಜೀನಾಮೆ ನೀಡುತ್ತಿದ್ದರೆ ಅಕ್ರಮ ಮರುಕಳಿಸುತ್ತಿರಲಿಲ್ಲವೇನೋ. ಮತ್ತೆ ಮತ್ತೆ ಅಕ್ರಮಗಳು ನಡೆಯುತ್ತವೆ ಎಂದಾದರೆ ನೀಟ್ ಪರೀಕ್ಷೆಯನ್ನು ರದ್ದುಗೊಳಿಸುವುದೇ ಉತ್ತಮ ಅಲ್ಲವೆ? ಈಗಾಗಲೇ ಪರೀಕ್ಷೆ ನಡೆಸುವ ಅಧಿಕಾರವನ್ನು ನಮಗೆ ಮರಳಿಸಿ ಎಂದು ರಾಜ್ಯಗಳು ಕೇಳುತ್ತಿವೆ. ತನ್ನಿಂದ ವಿಶ್ವಾಸಾರ್ಹ ಪರೀಕ್ಷೆಯನ್ನು ನಡೆಸಲು ಸಾಧ್ಯವಾಗುವುದಿಲ್ಲ ಎಂದ ಮೇಲೆ, ಅದನ್ನು ಆಯಾ ರಾಜ್ಯಗಳಿಗೆ ಒಪ್ಪಿಸುವುದರಲ್ಲೇ ಶಿಕ್ಷಣ ಕ್ಷೇತ್ರಕ್ಕೆ ಒಳಿತುಗಳಿವೆ. ರಾಜ್ಯಗಳಿಗೆ ಅಧಿಕ ಹೊಣೆಗಾರಿಕೆಯನ್ನು ನೀಡುವ ಮೂಲಕ ನೀಟ್ ಪ್ರವೇಶ ಪರೀಕ್ಷೆಯ ನಿರ್ವಹಣೆಯನ್ನು ವಿಕೇಂದ್ರೀಕರಿಸಬೇಕು ಎಂದು ಭಾರತೀಯ ಮೆಡಿಕಲ್ ಅಸೋಸಿಯೇಶನ್ ಕೂಡ ಸರಕಾರವನ್ನು ಆಗ್ರಹಿಸಿದೆ ಅಥವಾ ಎನ್‌ಟಿಎ ಬದಲಿಗೆ ನೂತನ ಸ್ವಾಯತ್ತ ಸಂಸ್ಥೆಯನ್ನಾದರೂ ನೇಮಿಸಬೇಕು. ನೀಟ್ ಪರೀಕ್ಷೆಯ ಸುಧಾರಣೆಗೆ ಕೇಂದ್ರ ಸರಕಾರ ನೀಡುವ ಅತಿ ದೊಡ್ಡ ಕೊಡುಗೆಯೆಂದರೆ, ತನ್ನ ತಪ್ಪನ್ನು ಒಪ್ಪಿಕೊಂಡು ಕೇಂದ್ರ ಶಿಕ್ಷಣ ಸಚಿವರು ರಾಜೀನಾಮೆಯನ್ನು ನೀಡಿ, ಕತ್ತಲಲ್ಲಿ ಕಂಗಾಲಾಗಿ ಕುಳಿತಿರುವ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸವನ್ನು ತುಂಬುವುದು. ಪುಲ್ವಾಮ, ಪಹಲ್ಗಾಮ್ ದಾಳಿಯ ಭದ್ರತಾ ವೈಫಲ್ಯಗಳ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡದ ಸರಕಾರ, ಕನಿಷ್ಠ ಶಿಕ್ಷಣ ವ್ಯವಸ್ಥೆಯ ಮೇಲೆ ನಡೆದ ಈ ಭಯೋತ್ಪಾದನಾ ದಾಳಿಯನ್ನಾದರೂ ಗಂಭೀರವಾಗಿ ತೆಗೆದುಕೊಳ್ಳುತ್ತದೆಯೇ ಎಂದು ದೇಶ ಕಾಯುತ್ತಿದೆ.

ವಿರುದ್ಧದ ಹೋರಾಟ ನಿಲ್ಲೋಲ್ಲ: ದೆಹಲಿಯಲ್ಲಿ ಅಧಿಕಾರ ಕಳೆದುಕೊಳ್ಳಲಿದ್ದಾರೆ: ಮಮತಾ ಬ್ಯಾನರ್ಜಿ



ಪಶ್ಚಿಮ ಬಂಗಾಳ,ಮೇ.20-

ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 207 ಸ್ಥಾನಗಳನ್ನು ಗೆದ್ದು ಭರ್ಜರಿ ಜಯ ಸಾಧಿಸಿದ್ದು, ಕಳೆದ 15 ವರ್ಷಗಳಿಂದ ರಾಜ್ಯದಲ್ಲಿ ಆಡಳಿತ ನಡೆಸುತ್ತಿದ್ದ ಟಿಎಂಸಿಗೆ ಭಾರೀ ಹೊಡೆತ ನೀಡಿದೆ. ಟಿಎಂಸಿ ಕೇವಲ 80 ಸ್ಥಾನಗಳಿಗೆ ಸೀಮಿತವಾಗಿದೆ.

ಚುನಾವಣೆ ಫಲಿತಾಂಶ ಪ್ರಕಟವಾದ ಬಳಿಕ ರಾಜ್ಯದ ಹಲವು ಭಾಗಗಳಲ್ಲಿ ಹಿಂಸಾಚಾರ, ದಾಳಿ ಹಾಗೂ ಟಿಎಂಸಿ ಕಚೇರಿಗಳ ಮೇಲೆ ದಾಳಿ ನಡೆದ ಘಟನೆಗಳೂ ನಡೆದಿವೆ.

ಈ ಹಿನ್ನೆಲೆಯಲ್ಲಿ ಟಿಎಂಸಿ ಪಕ್ಷ ಕೋಲ್ಕತಾ ಹೈಕೋರ್ಟ್ ಮೊರೆ ಹೋಗಿದ್ದು, ಚುನಾವಣೋತ್ತರ ಹಿಂಸಾಚಾರದ ಕುರಿತು ನ್ಯಾಯಾಂಗ ಮೇಲ್ವಿಚಾರಣೆಯ ತನಿಖೆ ನಡೆಸುವಂತೆ ಮನವಿ ಮಾಡಿದೆ.

ಈ ಸಂಬಂಧ ಮೇ 14ರಂದು ಮಮತಾ ಬ್ಯಾನರ್ಜಿ ವಕೀಲರ ಉಡುಪು ಧರಿಸಿ ಸ್ವತಃ ಕೋಲ್ಕತ್ತಾ ಹೈಕೋರ್ಟ್‌ಗೆ ಹಾಜರಾಗಿದ್ದು ಗಮನಸೆಳೆದಿತ್ತು. ಮುಖ್ಯ ನ್ಯಾಯಮೂರ್ತಿ ಸುಜಯ್ ಪಾಲ್ ಅವರ ಮುಂದೆ ವಿಚಾರಣೆಗೆ ಹಾಜರಾದ ಮಮತಾ, ರಾಜ್ಯದಲ್ಲಿ ಟಿಎಂಸಿ ಕಾರ್ಯಕರ್ತರ ಮೇಲೆ ದಾಳಿ ನಡೆದಿದ್ದು, ಸೂಕ್ತ ರಕ್ಷಣೆ ಒದಗಿಸಬೇಕು ಎಂದು ಒತ್ತಾಯಿಸಿದರು,

ಇನ್ನೊಂದೆಡೆ, ಬಿಜೆಪಿ ಹಾಗೂ ಟಿಎಂಸಿ ಎರಡೂ ಪಕ್ಷಗಳು ಪರಸ್ಪರ ಹಿಂಸಾಚಾರದ ಆರೋಪಗಳನ್ನು ಮಾಡುತ್ತಿದ್ದು, ಕೊಲ್ಕತ್ತಾ, ಹೌರಾ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ.

ಕಾಂಗ್ರೆಸ್ ಆಡಳಿತಕ್ಕೆ 3 ವರ್ಷ: ಒಳಮೀಸಲಾತಿಯನ್ನು ಸಮಸ್ಯೆಯನ್ನಾಗಿಸಿದ ಸರ್ಕಾರ

ಬಹುಶಃ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ಮೂರು ವರ್ಷಗಳಲ್ಲಿ ಅತಿಹೆಚ್ಚು ಪೀಕಲಾಟಕ್ಕೆ ಒಳಗಾಗಿದ್ದು ಒಳಮೀಸಲಾತಿ ವಿಚಾರದಲ್ಲೇ ಇರಬಹುದು ಅನಿಸುತ್ತದೆ.

2023ರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಗೆದ್ದದ್ದು ಕೇವಲ ಆಡಳಿತ ವಿರೋಧಿ ಅಲೆಯಿಂದಾಗಿ ಮಾತ್ರವಲ್ಲ. ಸಮುದಾಯಗಳ ಬೇಡಿಕೆಗಳನ್ನು ಕೇಂದ್ರೀಕರಿಸಿದ್ದ ಕಾಂಗ್ರೆಸ್, ಅವುಗಳನ್ನು ಈಡೇರಿಸುವ ವಾಗ್ದಾನ ನೀಡಿತ್ತು. ಜಾತಿವಾದಿ ಅರ್ಥಾತ್ ಕೋಮುವಾದಿ ಶಕ್ತಿಗಳ ಅಧಿಕಾರದಿಂದಾಗಿ ಬೇಸತ್ತಿದ್ದ ದಲಿತರಿಗೆ ಕಾಂಗ್ರೆಸ್ ನೀಡಿದ್ದ ಭರವಸೆಗಳು ನಂಬಿಕೆ ಹುಟ್ಟಿಸಿದ್ದವು. ಅದರಲ್ಲೂ ದಶಕಗಳಿಂದ ಚರ್ಚೆಯ ಕೇಂದ್ರವಾಗಿದ್ದ ಒಳಮೀಸಲಾತಿ ವಿಚಾರದಲ್ಲಿ ಸ್ಪಷ್ಟ ನಿಲುವನ್ನು ಕಾಂಗ್ರೆಸ್ ಪಕ್ಷ ತಾಳಿತ್ತು. ಹೀಗಾಗಿ ಪರಿಶಿಷ್ಟ ಜಾತಿಗಳ ಮೀಸಲಾತಿ ವರ್ಗೀಕರಣ ಸಮರ್ಪಕವಾಗಿ ಜಾರಿಯಾಗಲೇಬೇಕು ಎಂದು ಆಗ್ರಹಿಸುತ್ತಿದ್ದ ಸಮುದಾಯಗಳು ಕಾಂಗ್ರೆಸ್‌ನಿಂದ ದೂರಸರಿಯಲಿಲ್ಲ.

ಸ್ಪಷ್ಟ ಬಹುಮತ ಪಡೆದ ಕಾಂಗ್ರೆಸ್, ಅಧಿಕಾರಕ್ಕೇರಿ ಈಗ ಮೂರು ವರ್ಷ ತುಂಬಿದೆ. ಈ ಮೂರು ವರ್ಷಗಳಲ್ಲಿ ಒಳಮೀಸಲಾತಿ ವಿಚಾರವು ಕಂಡ ಏಳುಬೀಳುಗಳನ್ನು ಪುನರಾವಲೋಕನ ಮಾಡಿ, ಇನ್ನೂ ಆಗಬೇಕಿರುವ ಕೆಲಸಗಳತ್ತ ಕಾಂಗ್ರೆಸ್ ಸರ್ಕಾರವನ್ನು ಒತ್ತಾಯಿಸುವ ಜರೂರಿದೆ.

ಆ ದಿನಗಳು ಹೀಗಿದ್ದವು..

ಅವಿಭಜಿತ ಆಂಧ್ರಪ್ರದೇಶದಲ್ಲಿ ತಾರಕ್ಕೇರಿದ ಒಳಮೀಸಲಾತಿ ಹೋರಾಟವು ಕರ್ನಾಟಕ್ಕೆ ಕಾಲಿಟ್ಟು ಮೂರು ದಶಕಗಳೇ ಆಗಿತ್ತು. ಆದರೆ ಆಂಧ್ರದಲ್ಲಿ ಮಾಲಹೊಲೆಯ (ಬಲಗೈ), ಮಾದಿಗ (ಎಡಗೈ) ತಿಕ್ಕಾಟ ದೊಡ್ಡ ಮಟ್ಟದಲ್ಲಿತ್ತು. ಆ ಸಂಘರ್ಷ ಕರ್ನಾಟಕದಲ್ಲಿ ಉಲ್ಬಣಿಸದಂತೆ ಇರುವುದಕ್ಕೆ ಇಲ್ಲಿನ ಜಾಗೃತ ದಲಿತ ಪ್ರಜ್ಞೆಯೇ ಕಾರಣವಾಗಿತ್ತು. ಒಳಮೀಸಲಾತಿಯು ಸಾಂವಿಧಾನಿಕ ಹಕ್ಕು ಮತ್ತು ಹಂಚಿಕೆ ಇಲ್ಲದೆ ಒಂದಾಗಲು ಸಾಧ್ಯವಿಲ್ಲ ಎಂಬ ಅರಿವು ಸಮಸ್ತ ಅಸ್ಪೃಶ್ಯ ಸಮುದಾಯದಲ್ಲಿ ಮೂಡಲು ಸಮಯ ತೆಗೆದುಕೊಂಡಿತು. ಬಿಜೆಪಿಯ ದುರಾಡಳಿತವನ್ನು ಕಂಡಿದ್ದ ದಲಿತರು ಒಂದೆಡೆ ಒಂದಾಗುತ್ತಲೂ ಮತ್ತೊಂದೆಡೆ ಸಾಮಾಜಿಕ ನ್ಯಾಯಕ್ಕಾಗಿ ಒಳಮೀಸಲಾತಿ ಜಾರಿಯಾಗಲೇಬೇಕು ಎಂಬ ನಿಲುವಿಗೂ ಬಂದರು.

ಒಳಮೀಸಲಾತಿ 14

2022ರಲ್ಲಿ ನಡೆದ ಒಳಮೀಸಲಾತಿ ಹೋರಾಟ ಕರ್ನಾಟಕದ ದಲಿತ ಚಳವಳಿಯಲ್ಲಿ ಒಂದು ಮೈಲುಗಲ್ಲಾಗಿ ಉಳಿಯುತ್ತದೆ. ಬಿಜೆಪಿಯ ಅಸಲಿ ಬಣ್ಣವನ್ನು ತೊಳೆದು ನಿಲ್ಲಿಸಿದ ಇಸವಿ 2022. ಒಂದು ಕಡೆ ಒಳಮೀಸಲಾತಿ ಜಾರಿ ಮಾಡುತ್ತೇವೆ ಎನ್ನುತ್ತಿದ್ದ ಬಿಜೆಪಿ ಕೇಂದ್ರದಲ್ಲಿ ಅಧಿಕಾರದಲ್ಲಿತ್ತು. ಒಳಮೀಸಲಾತಿ ಜಾರಿಗೆ ಕೇಂದ್ರ ಸರ್ಕಾರ ಸಂವಿಧಾನಕ್ಕೆ ತಿದ್ದುಪಡಿ ತರುವ ಅನಿವಾರ್ಯತೆ ಅಂದು ಇತ್ತು. ಆದರೆ ಕೋರ್ಟ್‌ನಲ್ಲಿ ಕೇಸ್ ಇದೆ ಎಂಬ ನೆಪದಲ್ಲಿ ನಾಟಕವಾಡುತ್ತಲೇ ಇತ್ತು. ತಮಗೆ ಬೇಕಾದ ಜನವಿರೋಧಿ ಕಾನೂನುಗಳನ್ನು ಯಾವುದೇ ನ್ಯಾಯಾಂಗವನ್ನೂ ನೋಡದೆ ಸುಗ್ರೀವಾಜ್ಞೆ ಮೂಲಕ ತರುವಷ್ಟು ದಾಷ್ಟ್ಯ ತೋರುತ್ತಿದ್ದ ಬಿಜೆಪಿ, ಸಬ್ ಜ್ಯುಡೀಸ್ (ನ್ಯಾಯಾಂಗದಲ್ಲಿ ಪ್ರಕರಣವಿದೆ) ಎಂಬ ನೆಪ ಹೇಳುತ್ತಿದ್ದನ್ನು ದಲಿತ ಸಮುದಾಯ ಗಮನಿಸುತ್ತಿತ್ತು. ಒಂದು ಸಮಯದಲ್ಲಿ ''ಒಳಮೀಸಲಾತಿ ಜಾರಿ ಪ್ರಸ್ತಾಪ ನಮ್ಮ ಮುಂದೆ ಇಲ್ಲ'' ಎಂದು ಅಂದಿನ ಕೇಂದ್ರ ಸಾಮಾಜಿಕ ನ್ಯಾಯ ಸಚಿವಾಲಯದ ರಾಜ್ಯ ಖಾತೆ ಸಚಿವ ಎ.ನಾರಾಯಣಸ್ವಾಮಿ ಸದನದಲ್ಲೇ ಹೇಳಿದ್ದುಂಟು.

ಇಂತಹ ಬೂಟಾಟಿಕೆಯ ಬಿಜೆಪಿಯ ಜೊತೆ ಸೆಣಸಾಡುವುದು ಅನಿವಾರ್ಯವಾಗಿತ್ತು. ಆದರೆ ಬಿಜೆಪಿ ಸರ್ಕಾರ ಪರಿಶಿಷ್ಟರ ಮೀಸಲಾತಿಯನ್ನು ಹೆಚ್ಚಿಸುವ ಶಿಫಾರಸ್ಸಿಗಾಗಿ ಜಸ್ಟಿಸ್ ಎಚ್.ಎನ್.ನಾಗಮೋಹನ ದಾಸ್ ಸಮಿತಿ ರೂಪಿಸಿ, ಅದು ಕೊಟ್ಟ ವರದಿಯನ್ನು ಪರಿಗಣಿಸಿ ಶೇ.15ರಷ್ಟಿದ್ದ ಎಸ್ಸಿ ಮೀಸಲಾತಿಯನ್ನು ಶೇ.17ಕ್ಕೆ ಏರಿಸುವ ನಿರ್ಧಾರ ಕೈಗೊಂಡಿತು. ಆದರೆ ಇದು ಕೇಂದ್ರದಿಂದ ಊರ್ಜಿತವಾಗಿರಲಿಲ್ಲ, ಅರ್ಥಾತ್ ಸಂವಿಧಾನದ 9ನೇ ಶೆಡ್ಯೂಲ್ಗೆ ಸೇರಿಸಿ ನ್ಯಾಯಾಂಗ ಪ್ರಕ್ರಿಯೆಯಿಂದ ಒಳಮೀಸಲಾತಿಯನ್ನು ಹೊರಗಿಡುವ ಕೆಲಸವನ್ನು ಬಿಜೆಪಿ ಮಾಡಲಿಲ್ಲ. ಈ ಎಚ್ಚರ ಪರಿಶಿಷ್ಟರಲ್ಲಿತ್ತು.

2022ರ ಸನ್ನಿವೇಶದ ಚಿತ್ರಣಕ್ಕೆ ಮತ್ತೆ ಹೊರಳುವುದಾದರೆ, ಒಳಮೀಸಲಾತಿ ಬಿತ್ತಿದ್ದ ಜಾಗೃತ ಪ್ರಜ್ಞೆಯ ಮತ್ತೊಂದು ಫಸಲು ಈ ಸಂದರ್ಭದಲ್ಲಿ ಮೊಳೆಯಲಾರಂಭಿಸಿತು. ಅಸ್ಪೃಶ್ಯರು ಕಿತ್ತಾಡುತ್ತಿದ್ದೇವೆ, ಆದರೆ ನಮ್ಮ ಕಿತ್ತಾಟದ ನಡುವೆ ಸ್ಪೃಶ್ಯ ಸಮುದಾಯಗಳು ತಮ್ಮ ಪಾಲನ್ನು ಪಡೆಯುತ್ತಿವೆ. ನಾವೀಗ ಒಂದಾಗದಿದ್ದರೆ ಮೀಸಲಾತಿಯು ಮರೀಚಿಕೆಯಾಗುತ್ತದೆ. ಯಾವುದೇ ಸರ್ಕಾರದ ಮೇಲೂ ಹಿಡಿತ ಸಾಧಿಸುತ್ತಾ ಬಂದಿರುವ ಸ್ಪೃಶ್ಯರು, ನಮ್ಮ ಅನ್ನದ ಬಟ್ಟಲಿಗೆ ಕೈಹಾಕಿರುವುದನ್ನು ನಾವು ಸುಮ್ಮನೆ ನೋಡುತ್ತಾ ಕೂರುವುದು ಬೇಡ ಎಂಬ ಅರಿವನ್ನು ಹೋರಾಟ ಬಿತ್ತಲಾರಂಭಿಸಿತು. 2022ರ ಡಿಸೆಂಬರ್ 6ರಂದು ಬೆಂಗಳೂರಿನ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಡೆದ ದಲಿತರ ಸಾಂಸ್ಕೃತಿಕ ಪ್ರತಿರೋಧ ಬೃಹತ್ ಸಮಾವೇಶವು ಎರಡು ಮುಖ್ಯ ಸಂದೇಶವನ್ನು ರವಾನಿಸಿತು. ಛಿದ್ರಛಿದ್ರವಾಗಿದ್ದ ದಲಿತ ಸಂಘರ್ಷ ಸಮಿತಿಯ ಹತ್ತಾರು ಧಾರೆಗಳು ಒಂದು ವೇದಿಕೆಗೆ ಬಂದವು. ಹೊಲೆಯ ಮಾದಿಗರು ಸೇರಿ ಕಟ್ಟಿದ ದಸಂಸ ದಶಕಗಳ ನಂತರ ಐಕ್ಯ ವೇದಿಕೆಯಾಗಿ ಕಾಣಿಸಿಕೊಂಡಿತು.

ಈ ಪ್ರತಿರೋಧ ವೇದಿಕೆಯು ಕೊಟ್ಟ ಮತ್ತೊಂದು ಸಂದೇಶ- ಒಳಮೀಸಲಾತಿಯನ್ನು ಸರ್ಕಾರ ಜಾರಿಗೆ ತರಬೇಕು ಎಂಬುದಾಗಿತ್ತು. ಅದರ ಮುಂದುವರಿದ ಭಾಗವಾಗಿ ನಡೆಯುತ್ತಿದ್ದ ಮಾದಿಗರ ಕಾಲ್ನಡಿಗೆ ಜಾಥಾ ಬೆಂಗಳೂರು ತಲುಪಿದಾಗ ಬಲಗೈ ಸಮುದಾಯದ ಸಹೋದರರು ಬಂದು ನಿಂತರು. ದನಿ ಇಲ್ಲದ ಅಲೆಮಾರಿ ಮತ್ತು ಅತಿ ಸೂಕ್ಷ್ಮ ಅಸ್ಪೃಶ್ಯರು ಈ ಮಹಾ ಹೋರಾಟದ ಭಾಗವಾದರು. ಜೈ ಮಾದಿಗ ಎಂಬ ಘೋಷಣೆ ಕೂಗಬಾರದು, ಒಳಮೀಸಲಾತಿ ಹೋರಾಟವು ಎಲ್ಲ ಅಸ್ಪೃಶ್ಯ, ಅಲೆಮಾರಿಗಳ ಚಳವಳಿಯಾಗಿ ರೂಪುಗೊಂಡಿದೆ; ಸಮುದಾಯಗಳಲ್ಲಿ ಸಾಮರಸ್ಯ ಮತ್ತೆ ಚಿಗುರೊಡೆಯುತ್ತಿದೆ ಎಂಬ ಸಂದೇಶ ರವಾನಿಸಿದ ಚಳವಳಿಗಾರರು ತಮ್ಮ ಹೋರಾಟದ ಬ್ಯಾನರ್ ಹೆಸರನ್ನೇ ಬದಲಿಸಿದರು. ಮಾದಿಗ ಮೀಸಲಾತಿ ಹೋರಾಟ ಸಮಿತಿ, ಮಾದಿಗ ದಂಡೋರ ಹೆಸರಲ್ಲಿ ಮುಂದುವರಿದಿದ್ದ ಚಳವಳಿಯ ವೇದಿಕೆ ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಹೋರಾಟ ಸಮಿತಿ ಹೆಸರಲ್ಲಿ ಮರುಹುಟ್ಟು ಪಡೆಯಿತು.

2022ರ ಡಿಸೆಂಬರ್ ಆರಂಭದಲ್ಲಿಯೇ ದಸಂಸದ ಮೊದಲ ಸಂಚಾಲಕ ಬಿ.ಕೃಷ್ಣಪ್ಪನವರ ಕರ್ಮಭೂಮಿ ಹರಿಹರದಿಂದ ಮಾದಿಗ ಸಮುದಾಯ ಕಾಲ್ನಡಿಗೆ ಜಾಥಾವನ್ನು ಶುರು ಮಾಡಿತ್ತು. ಪ್ರತಿ ಊರಿನಲ್ಲಿ ಈ ಜಾಥಕ್ಕೆ ವ್ಯಾಪಕ ಬೆಂಬಲ ವ್ಯಕ್ತವಾಯಿತು. ನೂರಾರು ಯುವಜನರು ಜಾಥಾದೊಂದಿಗೆ ಹೆಜ್ಜೆ ಹಾಕಿದರು. ಡಿಸೆಂಬರ್ 11ಕ್ಕೆ ಬೆಂಗಳೂರು ತಲುಪಿದ ಕಾಲ್ನಡಿಗೆಗೆ ಹಲವು ಸಾವಿರಾರು ಜನ ಹರಿದು ಬಂದರು. ಫ್ರೀಡಂ ಪಾರ್ಕ್ ಸುತ್ತಲಿನ ಎಲ್ಲಾ ರಸ್ತೆಗಳಲ್ಲಿ ನೀಲಿ ಬಾವುಟಗಳು ಆರ್ಭಟಿಸಿದವು. ಎಡ-ಬಲ ಎನ್ನದೇ ಎಲ್ಲಾ ದಲಿತರು ಒಟ್ಟಾಗಿ ದೊಡ್ಡ ಪ್ರತಿರೋಧ ತೋರಿದರು. ಹೋರಾಟಗಾರರನ್ನು ಸಮಾಧಾನ ಮಾಡಲು ಸರ್ಕಾರದ ಪ್ರತಿನಿಧಿಯಾಗಿ ಬಂದ ವಿ.ಸೋಮಣ್ಣನಿಗೆ ಘೇರಾವ್ ಹಾಕಿ ಓಡಿಸಲಾಯಿತು. ಸಿಎಂ ಬರಬೇಕೆಂದು ಒತ್ತಾಯಿಸಲಾಯಿತು. ಸಿಟ್ಟಾದ ಸರ್ಕಾರ, ಸಾರ್ವಜನಿಕರಿಗೆ ಅಡಚಣೆ ಉಂಟು ಮಾಡಿ ಪ್ರತಿಭಟನೆ ನಡೆಸಿದ್ದಾರೆಂದು ನೆಪವೊಡ್ಡಿ ಪ್ರತಿ ಹೋರಾಟಗಾರರ ಮೇಲೆ ಕೇಸ್ ಜಡಿಯಿತು.

ಆದರೆ, ಸಮುದಾಯ ಪಟ್ಟುಬಿಡಲಿಲ್ಲ. ತದನಂತರ ಅದೇ ಫ್ರೀಡಂ ಪಾರ್ಕ್‌ನಲ್ಲಿ ಬರೋಬ್ಬರಿ 111 ದಿನಗಳ ಕಾಲ ನಿರಂತರವಾಗಿ ಸತ್ಯಾಗ್ರಹ ನಡೆಸಿತು. ಹೊಲೆಯ, ಮಾದಿಗ ಸಮುದಾಯಗಳ ಒಗ್ಗಟ್ಟು ಈ ವೇದಿಕೆಯಲ್ಲಿ ಪ್ರದರ್ಶನವಾಯಿತು. ಆನಂತರ ಮಾಧುಸ್ವಾಮಿ ನೇತೃತ್ವದ ಕ್ಯಾಬಿನೆಟ್ ಸಬ್ ಕಮಿಟಿಯನ್ನು ಬಿಜೆಪಿ ಸರ್ಕಾರ ರಚನೆ ಮಾಡಿತು. ಚುನಾವಣೆ ಹೊಸ್ತಿಲಿನ ಸ್ಟಂಟ್ ಆಗಿದ್ದ ಸಮಿತಿಯು, ಅದು ಸದಾಶಿವ ಆಯೋಗದ ವರದಿಯನ್ನು ಮೂಲೆಗೆ ತಳ್ಳಿ, ತನ್ನದೇ ಹೊಸ ರೀತಿಯ ವರ್ಗೀಕರಣವನ್ನು ತರಾತುರಿಯಲ್ಲಿ ಕೇಂದ್ರಕ್ಕೆ ಕಳುಹಿಸಿತು. ಆಂಧ್ರ, ಪಂಜಾಬ್ ರಾಜ್ಯಗಳ ಅರ್ಜಿಗಳು ಸೇರಿದಂತೆ ವಿವಿಧ 23 ಮನವಿಗಳು ಸುಪ್ರೀಂಕೋರ್ಟ್ ಮುಂದೆ ಇವೆ ಎಂಬ ನೆಪದಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರದೆ ಕೇಂದ್ರದಲ್ಲಿ ಹತ್ತು ವರ್ಷಗಳಿಂದ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ, ದಲಿತ ಸಮುದಾಯವನ್ನು ವಂಚಿಸಿದ್ದು ಮುಂದುವರಿಯಿತು. ಶೇ.3ರಷ್ಟಿರುವರ ಬ್ರಾಹ್ಮಣ, ಬನಿಯಾಗಳಿಗೆ ಶೇ.10ರಷ್ಟು ಮೀಸಲಾತಿಯನ್ನು ಇಡಬ್ಲ್ಯುಎಸ್ ಅಡಿಯಲ್ಲಿ ಕೇವಲ ಒಂದೇ ವಾರದಲ್ಲಿ ಜಾರಿಗೆ ತಂದಿದ್ದ ಬಿಜೆಪಿಗೆ ಮೂವತ್ತು ವರ್ಷಗಳ ಸುದೀರ್ಘ ಹೋರಾಟದ ನೋವು ಅರಿವಾಗಲೇ ಇಲ್ಲ. ಈ ಎಲ್ಲ ಬೆಳವಣಿಗೆಗಳನ್ನು ಗಮನಿಸಿದ್ದ ಕಾಂಗ್ರೆಸ್, ಒಳಮೀಸಲಾತಿ ವಿಚಾರದಲ್ಲಿ ಖಚಿತ ನಿರ್ಧಾರಕ್ಕೆ ಬರುವ ಜೊತೆಗೆ, ನಾವಿನ್ನು ಒಳಮೀಸಲಾತಿ ವಿರುದ್ಧವಿಲ್ಲ ಎಂಬ ನಿಲುವು ತೆಗೆದುಕೊಳ್ಳಲೇಬೇಕಾದ ಒತ್ತಡ ಸೃಷ್ಟಿಯಾಯಿತು.

2023ರ ಜನವರಿ 8ರಂದು ಚಿತ್ರದುರ್ಗದಲ್ಲಿ ಕಾಂಗ್ರೆಸ್ ನಡೆಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಐಕ್ಯತಾ ಸಮಾವೇಶವು ಚುನಾವಣಾ ಫಲಿತಾಂಶದ ಮೇಲೆ ಬಹುದೊಡ್ಡ ಪರಿಣಾಮ ಬೀರಿತ್ತು. ಕಾರಣ ಕಾಂಗ್ರೆಸ್ ನಾಯಕರು ದಲಿತರಿಗೆ ಕೊಟ್ಟ ಭರವಸೆಗಳಲ್ಲಿ ಎರಡು ಮುಖ್ಯ ಸಂಗತಿಗಳಿದ್ದವು: 1. ಎಸ್ಸಿ () ಮೀಸಲಾತಿಯನ್ನು ಶೇ. 15 ರಿಂದ 17ಕ್ಕೆ ಮತ್ತು ಎಸ್ಟಿ () ಮೀಸಲಾತಿಯನ್ನು ಶೇ.3 ರಿಂದ 7ಕ್ಕೆ ಹೆಚ್ಚಿಸಿರುವ ಕಾನೂನನ್ನು ಸಂವಿಧಾನದ 9ನೇ ಶೆಡ್ಯೂಲ್‌ಗೆ (9) ಸೇರಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವುದು ಹಾಗೂ ರಾಜ್ಯ ಮಟ್ಟದಲ್ಲಿ ಇದಕ್ಕೆ ಸಂಪೂರ್ಣ ಸಾಂವಿಧಾನಿಕ ಬದ್ಧತೆ ನೀಡುವುದು. 2. ನ್ಯಾಯಮೂರ್ತಿ ಎ.ಜೆ ಸದಾಶಿವ ಆಯೋಗದ ವರದಿಯ ಆಧಾರದ ಮೇಲೆ, ಎಸ್ಸಿ ವರ್ಗದ ಎಲ್ಲ ಉಪ ಜಾತಿಗಳ ಹಿತಾಸಕ್ತಿಗಳನ್ನು ಕಾಯ್ದಿರಿಸಿ, ಸಾಮಾಜಿಕ ನ್ಯಾಯದಡಿಯಲ್ಲಿ ಒಳ ಮೀಸಲಾತಿ ಕಲ್ಪಿಸಲು ಉಭಯ ಸದನಗಳ ಒಪ್ಪಿಗೆ ಪಡೆದು ಕೇಂದ್ರಕ್ಕೆ ಶಿಫಾರಸು ಮಾಡುವುದು.

''ಒಳಮೀಸಲಾತಿ ಜಾರಿಗೆ ಬದ್ಧ'' ಎಂಬ ನಿಲುವೇ ಕಾಂಗ್ರೆಸ್ಗೆ ವರದಾನವಾಯಿತು. ಚುನಾವಣೆಯಲ್ಲೂ ಗೆದ್ದಿತು. ಕೋರ್ಟ್ ನೆಪವನ್ನಿಟ್ಟು ನಾಟಕವಾಡಿದ ಬಿಜೆಪಿ ಸೋತು ಮನೆಗೆ ಸೇರಿತು. ಅಧಿಕಾರಕ್ಕೆ ಏರಿದ ಕಾಂಗ್ರೆಸ್, ಸುಮಾರು ಒಂದು ವರ್ಷ ಕಾಲ ಒಳಮೀಸಲಾತಿ ವಿಚಾರದಲ್ಲಿ ನಿರ್ಲಕ್ಷ್ಯ ತಾಳಿದ್ದು ಮತ್ತೆ ಸಮುದಾಯದಲ್ಲಿ ಆಕ್ರೋಶ ಭುಗಿಲೇಳಲು ಕಾರಣವಾಯಿತು. ಅಂತಿಮವಾಗಿ ನ್ಯಾಯಾಂಗದಿಂದಲೇ ನ್ಯಾಯ ದೊರಕಿತು. ಸುಪ್ರೀಂಕೋರ್ಟ್ 2024ರ ಆಗಸ್ಟ್ 1ರಂದು ತೀರ್ಪು ನೀಡಿ, ಒಳಮೀಸಲಾತಿ ಜಾರಿಗೊಳಿಸುವ ಅಧಿಕಾರ ರಾಜ್ಯ ಸರ್ಕಾರಗಳಿಗಿದೆ ಎಂಬ ಮಹತ್ವದ ಸಂದೇಶ ಸಾರಿತು. ಆ ನಂತರ ರಾಜ್ಯ ಸರ್ಕಾರ ತಡವಾಗಿಯಾದರೂ ಜಸ್ಟಿಸ್ ಎಚ್.ಎನ್.ನಾಗಮೋಹನ್ ದಾಸ್ ನೇತೃತ್ವದಲ್ಲಿ ಏಕಸದಸ್ಯ ಆಯೋಗವನ್ನು ರಚನೆ ಮಾಡಿತು. ಆನಂತರ ನಡೆದ ಬೆಳವಣಿಗೆಗಳು ಆಶಾದಾಯಕವಾಗಿಯೇನೂ ಇರಲಿಲ್ಲ. ಒಳಮೀಸಲಾತಿ ವಿಚಾರ ಕಳೆದ ಮೂರು ವರ್ಷಗಳಿಂದಲೂ ಎಳೆದಾಡಿಕೊಂಡು ಬಂದಿರುವ ರೀತಿಯು ಕರ್ನಾಟಕ ರಾಜಕಾರಣದ ಮತ್ತೊಂದು ಮಗ್ಗುಲನ್ನು ತೆರೆದಿಡುತ್ತದೆ.

ಜಸ್ಟಿಸ್ ಎಚ್.ಎನ್.ನಾಗಮೋಹನ ದಾಸ್ ವರದಿ

ಸುಪ್ರೀಂಕೋರ್ಟ್ ನೀಡಿದ ಅಂತಿಮ ತೀರ್ಪಿನ ಅನ್ವಯ ರಾಜ್ಯ ಸರ್ಕಾರಗಳೀಗ ಮೀಸಲಾತಿ ವರ್ಗೀಕರಣ ಮಾಡುವ ಹಕ್ಕು ಪಡೆದಿವೆ. ಅದರ ಭಾಗವಾಗಿ ತೆಲಂಗಾಣ, ಆಂಧ್ರ ಪ್ರದೇಶದಲ್ಲಿ ಒಳಮೀಸಲಾತಿ ಜಾರಿಯಾಯಿತು. ಕರ್ನಾಟಕದಲ್ಲಿ ಒಳಮೀಸಲಾತಿ ಜಾರಿ ವಿಳಂಬವಾಗುತ್ತಲೇ ಇತ್ತು. ಅದಕ್ಕೆ ಇಲ್ಲಿದ್ದ ಸಂಕೀರ್ಣ ಜಾತಿ ದೃಢೀಕರಣ ಪತ್ರಗಳೂ ಕಾರಣವಾಗಿದ್ದವು. ಇನ್ನೊಂದೆಡೆ ಪ್ರಬಲ ಸ್ಪೃಶ್ಯ ಸಮುದಾಯಗಳ ಎದುರಿಸುವ ಛಾತಿಯೂ ಕಾಂಗ್ರೆಸ್ ಸರ್ಕಾರಕ್ಕೆ ಇಲ್ಲವಾಗಿದ್ದು ಗೋಚರಿಸುತ್ತಿತ್ತು.

ಕರ್ನಾಟಕದಲ್ಲಿ ಹೊಲೆಯ, ಮಾದಿಗರಿಬ್ಬರೂ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ, ಹೆಸರಲ್ಲಿ ಜಾತಿ ಪ್ರಮಾಣ ಪತ್ರಗಳನ್ನು ಪಡೆದಿರುವುದರಿಂದ ಯಾರು ಯಾವ ಜಾತಿ ಎಂಬುದು ತಿಳಿಯುವುದು ಅನಿವಾರ್ಯವಾಗಿತ್ತು. ಮೀಸಲಾತಿ ವರ್ಗೀಕರಿಸಬೇಕಾದರೆ ಜನಸಂಖ್ಯೆಯನ್ನು ತಿಳಿಯುವುದು ಅಗತ್ಯವಿತ್ತು. ಅದಕ್ಕಾಗಿ ಸರ್ಕಾರವು ಜಸ್ಟಿಸ್ ಎಚ್.ಎನ್. ನಾಗಮೋಹನ್ ದಾಸ್ ನೇತೃತ್ವದಲ್ಲಿ ಏಕ ಸದಸ್ಯ ಆಯೋಗವನ್ನು ರಚಿಸಿತು. ಜಸ್ಟಿಸ್ ದಾಸ್ ಆಯೋಗವು ಸುಮಾರು ಒಂದೂವರೆ ತಿಂಗಳ ಕಾಲ ನಡೆಸಿದ ಸುದೀರ್ಘ ಸಮೀಕ್ಷೆ ನಂತರ ಸರ್ಕಾರಕ್ಕೆ ತನ್ನ ವರದಿಯನ್ನು ನೀಡಿತು.

ಬಿಜೆಪಿ ಅವಧಿಯಲ್ಲಿ ಶೇ.2ರಷ್ಟು ಮೀಸಲಾತಿಯನ್ನು ಹೆಚ್ಚಿಸಲಾಗಿತ್ತು. ಅದನ್ನು ಪರಿಗಣನೆಗೆ ತೆಗೆದುಕೊಂಡು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಪರಿಶಿಷ್ಟರನ್ನು ಐದು ವಿಭಾಗಗಳನ್ನಾಗಿ ಮಾಡಿದ ಜಸ್ಟಿಸ್ ದಾಸ್ ಅವರು ಮೀಸಲಾತಿ ಹಂಚಿಕೆ ಮಾಡಿದರು. ಅತೀ ಹಿಂದುಳಿದ ಅಲೆಮಾರಿ ಮತ್ತು ಅತಿ ಸೂಕ್ಷ್ಮ ಅಸ್ಪೃಶ್ಯರನ್ನು ಪ್ರವರ್ಗ ಎಗೆ ಸೇರಿಸಿ ಶೇ. 1, ಮಾದಿಗ ಮತ್ತು ಸಂಬಂಧಿತ ಸಮುದಾಯಗಳನ್ನು ಪ್ರವರ್ಗ ಬಿಗೆ ಸೇರಿಸಿ ಶೇ. 6, ಹೊಲೆಯ ಮತ್ತು ಸಂಬಂಧಿತ ಸಮುದಾಯಗಳನ್ನು ಪ್ರವರ್ಗ ಸಿಗೆ ಸೇರಿಸಿ ಶೇ. 5, ಸ್ಪೃಶ್ಯರಾದ ಲಂಬಾಣಿ, ಭೋವಿ, ಕೊರಚ ಮತ್ತು ಕೊರಮರನ್ನು ಪ್ರವರ್ಗ ಡಿಗೆ ಸೇರಿಸಿ ಶೇ. 4 ಹಾಗೂ ಸಮೀಕ್ಷೆಯಲ್ಲೂ ಜಾತಿಯನ್ನು ನಮೂದಿಸದೆ ಎಕೆ, ಎಡಿ, ಎಎ ಎಂದು ಬರೆಸಿದವರಿಗೆ ಪ್ರವರ್ಗ ಇ ಎಂದು ಘೋಷಿಸಿ ಶೇ.1ರಷ್ಟು ಮೀಸಲಾತಿಯನ್ನು ಜಸ್ಟಿಸ್ ದಾಸ್ ಶಿಫಾರಸ್ಸು ಮಾಡಿದರು. ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ಪರಿಗಣಿಸಬೇಕೆಂದು ಸುಪ್ರೀಂಕೋರ್ಟ್ ಹೊರಡಿಸಿರುವ ಮಾನದಂಡದ ಅನ್ವಯ ವರ್ಗೀಕರಣ ಮಾಡಿದ್ದರು ಜಸ್ಟಿಸ್ ದಾಸ್. ಆದರೆ ಆಯೋಗದ ವಿರುದ್ಧ ಮತ್ತೊಂದು ಸುತ್ತಿನ ಅಸಹನೆ ವ್ಯಕ್ತವಾಗತೊಡಗಿತು. ಬಲಗೈ ಸಮುದಾಯವು, ''ಇಲ್ಲಿ ಅವೈಜ್ಞಾನಿಕವಾಗಿ ವರ್ಗೀಕರಣ ಮಾಡಲಾಗಿದೆ, ನಮಗೆ ಕಡಿಮೆ ಪಾಲು ಕೊಡಲಾಗಿದೆ, ಹೊಲೆಯ ಸಂಬಂಧಿತ ಪರಯಾ ಮತ್ತು ಮೊಗೇರರನ್ನು ಮಾದಿಗರ ಗುಂಪಿಗೆ ಹಾಕಲಾಗಿದೆ'' ಎಂದು ಆಕ್ಷೇಪಿಸಿದರೆ, ಸ್ಪೃಶ್ಯ ಸಮುದಾಯಗಳು ತಮ್ಮ ಪಾಲನ್ನು ಹೆಚ್ಚಿಸಿಕೊಳ್ಳುವ ಕಸರತ್ತನ್ನು ತೆರೆಮರೆಯಲ್ಲೇ ಮಾಡಲಾರಂಭಿಸಿದವು.

ನಾಗಮೋಹನ್ ದಾಸ್ 1

ಮೂವತ್ತು ವರ್ಷ ಚಳವಳಿಯನ್ನು ಕಟ್ಟಿದ ಹಿರಿಯ ಮಾದಿಗ ಹೋರಾಟಗಾರರು ಅಂತಿಮ ಸುತ್ತಿನ ಹೋರಾಟಕ್ಕೆ ಸಜ್ಜಾದರು. ಈಗಾಗಲೇ ಎದ್ದಿದ್ದ ಭಿನ್ನಾಭಿಪ್ರಾಯಗಳನ್ನು ಮರೆತು ಫ್ರೀಡಂಪಾರ್ಕ್‌ನಲ್ಲಿ 2025ರ ಆಗಸ್ಟ್ 11ರಿಂದ ಹೋರಾಟಕ್ಕೆ ಕುಳಿತ ಹಿರಿಯ ಜೀವಗಳ ಒತ್ತಾಯಕ್ಕೆ ಸರ್ಕಾರ ಆರಂಭದಲ್ಲಿ ಮಣಿಯಲಿಲ್ಲ. ಸರ್ಕಾರ ವರದಿ ಸ್ವೀಕರಿಸಿದ್ದರೂ ಕ್ಯಾಬಿನೆಟ್ ಸಭೆಗಳಲ್ಲಿ ವಿಷಯವನ್ನು ಮುಂದಕ್ಕೆ ಹಾಕುತ್ತಲೇ ಇತ್ತು. ಹೀಗಾಗಿ ಅಂತಿಮ ಹೋರಾಟ ಸುಮಾರು ಹದಿನೈದು ದಿನಗಳ ಕಾಲ ಬಿರುಸಾಗಿ ನಡೆಯಿತು. ಫ್ರೀಡಂ ಪಾರ್ಕ್‌ನ ಟೆಂಟ್ನಲ್ಲಿ ಅಹೋರಾತ್ರಿ ಚಳವಳಿ ನಡೆಸಲಾಯಿತು. ನಾಡಿನ ಹಿರಿಯರು, ಹೋರಾಟಗಾರರು, ಸಂಘಟನೆಗಳು, ಯುವಜನರು ಅಣಿನೆರೆದರು. ನಟ್ಟಿರುಳ ನಾದ ಎಂಬ ಸಾಂಸ್ಕೃತಿಕ ಪ್ರತಿರೋಧ ಕಾರ್ಯಕ್ರಮ ನಡೆಯಿತು. ಹಾಗಾಗಿ ಸರ್ಕಾರ ವರದಿ ಜಾರಿ ಮಾಡುವ ಅನಿವಾರ್ಯತೆಗೆ ಸಿಲುಕಿತು. ಇನ್ನೊಂದೆಡೆ ಜಸ್ಟಿಸ್ ದಾಸ್ ಆಯೋಗದ ವರದಿ ವಿರುದ್ಧ ಭುಗಿಲೆದ್ದಿದ್ದ ಅಸಮಾಧಾನವನ್ನೂ ಪರಿಹರಿಸುವ ಸವಾಲೂ ಕೂಡ ಸರ್ಕಾರದ ಮುಂದಿತ್ತು.

ಎಲ್ಲ ರೀತಿಯ ಒತ್ತಡಕ್ಕೆ ಮಣಿದ ಸರ್ಕಾರ ಆಗಸ್ಟ್ 19ರಂದು ನಡೆದ ಕ್ಯಾಬಿನೆಟ್ ಸಭೆಯಲ್ಲಿ ದಾಸ್‌ರವರು ವಿಂಗಡಿಸಿದ್ದ ಐದು ಪ್ರವರ್ಗಗಳನ್ನು ಕೈಬಿಟ್ಟು, ಮೂರು ಪ್ರವರ್ಗಗಳನ್ನಾಗಿ ವಿಂಗಡಣೆ ಮಾಡಿ ಪ್ರವರ್ಗ ಎನಲ್ಲಿ ಮಾದಿಗ ಗುಂಪಿಗೆ ಶೇ. 6, ಪ್ರವರ್ಗ ಬಿನಲ್ಲಿ ಹೊಲೆಯ ಗುಂಪಿಗೆ ಶೇ.6ರಷ್ಟು ಮೀಸಲಾತಿಯನ್ನು ನೀಡಿತು. ಜೊತೆಗೆ ಜಸ್ಟಿಸ್ ದಾಸ್ ಅವರು ಪ್ರತ್ಯೇಕವಾಗಿಸಿದ್ದ ಎಕೆ, ಎಡಿ, ಎಎಗಳನ್ನು ಪ್ರವರ್ಗ ಎ ಮತ್ತು ಪ್ರವರ್ಗ ಬಿ ಎರಡಲ್ಲೂ ಸೇರಿಸಿತು. ಪ್ರವರ್ಗ ಸಿಗೆ ಅಲೆಮಾರಿ ಮತ್ತು ಅತಿಸೂಕ್ಷ್ಮ ಅಸ್ಪೃಶ್ಯರನ್ನು ಸೇರಿಸಿ, ಸ್ಪೃಶ್ಯ ಜಾತಿಗಳ ಗುಂಪಿಗೆ ಶೇ.5ರಷ್ಟು ಮೀಸಲಾತಿ ನೀಡಿತು. ತಬ್ಬಲಿ ಸಮುದಾಯಗಳಾದ ಅಲೆಮಾರಿ ಮತ್ತು ಅತೀ ಸೂಕ್ಷ್ಮ ಅಸ್ಪೃಶ್ಯರನ್ನು ಬಲಾಢ್ಯರ ಗುಂಪಿಗೆ ಸೇರಿಸಿದ್ದು ಚಾರಿತ್ರಿಕ ಅನ್ಯಾಯ. ಸರ್ಕಾರದ ಮಟ್ಟಿಗೆ ಇದೊಂದು ರಾಜಕೀಯ ನಿರ್ಧಾರ. ಆದರೆ ರಾಜಕೀಯಕ್ಕಾಗಿ ಇನ್ನೊಬ್ಬರ ಪಾಲನ್ನು ಕಿತ್ತುಕೊಳ್ಳುವುದು ಸಾಮಾಜಿಕ ನ್ಯಾಯದ ಅಣಕವಾಗಿತ್ತು. ಕೊನೆಗೆ ಅಲೆಮಾರಿಗಳು ಕೋರ್ಟ್ ಮೆಟ್ಟಿಲೇರಿದರು.

ಎ.ಕೆ., ಎ.ಡಿ., ಎಎ.ಗಳನ್ನು ಎರಡೂ ಕಡೆಗೆ ಹಂಚಿರುವುದು ಕೂಡ ಸರಿಯಾದ ಕ್ರಮ ಆಗಿರಲಿಲ್ಲ. ಜಸ್ಟಿಸ್ ದಾಸ್ ಆಯೋಗದ ವರದಿಯನ್ನು ಸೂಕ್ಷ್ಮವಾಗಿ ನೋಡಿದರೆ ಎ.ಕೆ., ಎ.ಎ., ಎ.ಡಿ ಎಂದು ಬರೆಸಿದವರು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಔದ್ಯೋಗಿಕವಾಗಿ ಮುಂದುವರಿದಿರುವುದು ಮೇಲು ನೋಟಕ್ಕೆ ಕಾಣುತ್ತಿತ್ತು. ಈ ಕಾರಣಕ್ಕೆ ಅವರನ್ನು ಪ್ರತ್ಯೇಕವಾಗಿ ಇಡುವುದೇ ಸೂಕ್ತ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಎ.ಕೆ., ಎ.ಡಿ. ಮತ್ತು ಎ.ಎ. ಎಂಬುದು ಪರಿಶಿಷ್ಟರಲ್ಲಿ 101 ಜಾತಿಗಳ ಪಟ್ಟಿಯಲ್ಲಿ ಜಾತಿಗಳಾಗಿಯೇ ನಮೂದಾಗಿರುವುದನ್ನು ಗಮನಿಸಬೇಕು. ಈ ಮೂರನ್ನು ಜಾತಿಪಟ್ಟಿಯಿಂದ ಹೊರಗಿಟ್ಟರೆ ಮಾತ್ರ ಸಮಸ್ಯೆ ಬಗೆಹರಿಯಬಹುದು ಎಂಬ ಅಭಿಪ್ರಾಯ ಬಂದಿತು. ಆದರೆ ಅವರು ಸಹ ಅಸ್ಪೃಶ್ಯತೆಯ ನೋವುಂಡವರು ಎಂಬ ಅಭಿಪ್ರಾಯ ಬಂದಿತು. ಇನ್ನೊಂದೆಡೆ ತಮ್ಮ ಸಾಂವಿಧಾನಿಕ ಪಾಲಿಗಾಗಿ ಬೀದಿ ಹೋರಾಟಗಳನ್ನು ನಡೆಸಿದ ಅಲೆಮಾರಿಗಳು ಸರ್ಕಾರದಿಂದ ಪಾಲು ಪಡೆಯಲಾಗದೆ ನ್ಯಾಯಾಂಗದ ಕದ ತಟ್ಟುವುದು ಅನಿವಾರ್ಯವಾಯಿತು. ಸರ್ಕಾರವು ಒಳಮೀಸಲಾತಿಯನ್ನು ಶೇ.17ರ ಅನ್ವಯ ಪರಿಗಣಿಸಿರುವುದರಿಂದ ವಾಸ್ತವದಲ್ಲಿ ಶೇ.50ರ ಮೀಸಲಾತಿ ಮಿತಿ ಮೀರಿದಂತಾಗಿದೆ ಎಂಬ ಪ್ರಶ್ನೆಯು ನ್ಯಾಯಾಂಗದ ಮುಂದೆ ಬಂದಿತು. ಮತ್ತೆ ಒಳಮೀಸಲಾತಿ ಪರಿಷ್ಕರಣೆಗೆ ಸರ್ಕಾರ ಮುಂದಾಯಿತು.

ರೋಸ್ಟರ್ ಗೊಂದಲ

ಸರ್ಕಾರ ಜಾರಿಗೆ ತಂದಿದ್ದ ಪರಿಶಿಷ್ಟ ಮೀಸಲಾತಿ ವರ್ಗೀಕರಣದಲ್ಲಿ ಮಾದಿಗ ಸಮುದಾಯವನ್ನು ಪ್ರವರ್ಗ ಎನಲ್ಲಿ ಇರಿಸಿದ್ದರಿಂದ ಸಹಜವಾಗಿ ಅವರಿಗೆ ಮೊದಲ ಅವಕಾಶ ಸಿಗುತ್ತದೆ. ಯಾವುದೇ ಸರ್ಕಾರಿ ಇಲಾಖೆಯಲ್ಲಿ ಒಂದುವೇಳೆ ಕಡಿಮೆ ಹುದ್ದೆಗಳ ನೇಮಕಾತಿ ನಡೆದು, ಅದರಲ್ಲಿ ಪ.ಜಾತಿಗೆ 2 ಅಥವಾ 3 ಹುದ್ದೆಗಳಷ್ಟೇ ಸಿಕ್ಕಿದಂತಹ ಸಂದರ್ಭದಲ್ಲಿ ಆಗ ಮೊದಲ ಅವಕಾಶ ಪ್ರವರ್ಗ ಎಗೆ ಸಿಗುವುದು ನಿಯಮಬದ್ಧವಾಗಿತ್ತು. ಆದರೆ ಕಡಿಮೆ ಇರುವ ಹುದ್ದೆಗಳಲ್ಲಿ ಬಲ ಸಮುದಾಯಕ್ಕೆ ಮತ್ತು ಸ್ಪೃಶ್ಯರಿಗೆ ಅವಕಾಶವೇ ಸಿಗುವುದಿಲ್ಲ ಎಂದು ವಿವಾದ ಎದ್ದಿತು. ವಿಶ್ವವಿದ್ಯಾಲಯಗಳ ಆಯಾಕಟ್ಟಿನ ಹುದ್ದೆಗಳಲ್ಲಿ ನೇಮಕಾತಿ ನಡೆದರೆ ಮಾದಿಗರಿಗೆ ಆದ್ಯತೆ ಸಿಗುತ್ತದೆ, ಇನ್ನುಳಿದವರಿಗೆ ಅವಕಾಶ ದೊರಕಲು ಕನಿಷ್ಠ 30 ವರ್ಷಗಳಾದರೂ ಬೇಕಾಗುತ್ತದೆ ಎಂದು ಸಮುದಾಯಗಳ ನಡುವೆ ಕಿಡಿ ಹೊತ್ತಿಸಲಾಯಿತು. ಅವಕಾಶ ವಂಚಿತ ಮಾದಿಗರಿಗೆ ಒಮ್ಮೆ ಇಂತಹದೊಂದು ಅವಕಾಶ ಬಿಟ್ಟುಕೊಡುವುದು ಮಾನವೀಯ ನೆಲೆಯಲ್ಲೂ ಮತ್ತು ಕಾನೂನಿನ ದೃಷ್ಟಿಯಲ್ಲೂ ಸರಿಯಾದ ಕ್ರಮವೇ ಆಗಿತ್ತು.

''ರೋಸ್ಟರ್ ಬಿಂದು ಸರಿಪಡಿಸಿ, ಒಳಮೀಸಲಾತಿ ಜಾರಿಗೆ ತನ್ನಿ ಎನ್ನಬೇಕಿದ್ದವರು, ಒಳಮೀಸಲಾತಿಯನ್ನೇ ಬೇಡ'' ಎನ್ನುವ ಮಟ್ಟಕ್ಕೆ ಹೋಗಿದ್ದರ ಹಿಂದೆ ಕೋಮುವಾದಿ ಶಕ್ತಿಗಳ ಹಿಕಮತ್ತು ಇತ್ತೆಂದು ಹೋರಾಟಗಾರರು ಹೇಳುತ್ತಾರೆ. ಎಡ ಮತ್ತು ಬಲ ಸಮುದಾಯಗಳಲ್ಲಿ ಸಕ್ರಿಯರಾಗಿದ್ದ ಕೋಮುವಾದಿ ಶಕ್ತಿಗಳ ಕೈಗೊಂಬೆಗಳು- ಈ ಬಿಕ್ಕಟ್ಟಿನ ನಡುವೆ ಚೆನ್ನಾಗಿಯೇ ಬೇಳೆ ಬೇಯಿಸಿಕೊಳ್ಳಲು ನೋಡಿದವು. ರೋಸ್ಟರ್ ಬಿಂದು ವಿವಾದ ಉಂಟಾದದ್ದು ಮತ್ತು ಶೇ. 17ರ ಮೀಸಲಾತಿ ಪ್ರಮಾಣದ ಸಂಬಂಧ ಹೈಕೋರ್ಟ್ ಮಧ್ಯಪ್ರವೇಶ ಮಾಡಿದ್ದರಿಂದ ಒಳಮೀಸಲಾತಿ ಬಿಕ್ಕಟ್ಟು ಮತ್ತೊಂದು ಸುತ್ತಿಗೆ ಜಿಗಿಯಿತು. ಮುಖ್ಯ ಕಾರ್ಯದರ್ಶಿಗಳ ನೇತೃತ್ವದ ತಾಂತ್ರಿಕ ಸಮಿತಿಯನ್ನು ರಚಿಸಿ, ಅದು ಕೊಟ್ಟ ಶಿಫಾರಸ್ಸುಗಳನ್ನು ಆಧರಿಸಿ ಮೀಸಲಾತಿ ಹಂಚಿಕೆ ಮಾಡಲು ಸರ್ಕಾರ ನಿರ್ಧರಿಸಿತು.

2026ರ ಏಪ್ರಿಲ್ 24ರಂದು ಕ್ಯಾಬಿನೆಟ್ ಕೈಗೊಂಡ ನಿರ್ಧಾರದ ಅನ್ವಯ ಹೊಸ ವರ್ಗೀಕರಣ ಸದ್ಯ ಚಾಲ್ತಿಯಲ್ಲಿದೆ. ಶೇ. 15ರ ಮೀಸಲಾತಿ ಪ್ರಮಾಣದಲ್ಲಿ ಪ್ರವರ್ಗ ಎಗೆ ಶೇ. 5.25, ಪ್ರವರ್ಗ ಬಿಗೆ ಶೇ. 5.25 ಮತ್ತು ಪ್ರವರ್ಗ ಸಿಗೆ ಶೇ. 4.5ರಂತೆ ಹಂಚಿಕೆ ಮಾಡಲಾಗಿದೆ. ಅಲೆಮಾರಿಗಳ ಪ್ರತಿರೋಧವನ್ನು ಶಮನ ಮಾಡಲು ಶೇ. 4.5ರಲ್ಲಿಯೇ ಶೇ. 20ರಷ್ಟು ಹುದ್ದೆಗಳನ್ನು ಮೀಸಲಿಡುವುದಾಗಿಯೂ ಮತ್ತು ಮೀಸಲಿಟ್ಟ ಹುದ್ದೆಗಳು ಅಲೆಮಾರಿಗಳಿಂದ ಭರ್ತಿಯಾಗದಿದ್ದರೆ ಸಿ ಗುಂಪಿನ ಇತರೆ ಸಮುದಾಯಗಳಿಗೆ ವರ್ಗಾಯಿಸುವುದಾಗಿಯೂ ಸರ್ಕಾರ ಹೇಳಿದೆ. ರೋಸ್ಟರ್ ವ್ಯವಸ್ಥೆಯಲ್ಲಿ ಗೊಂದಲ ಮುಂದುವರಿದಿದೆ. ಎ, ಬಿ, ಸಿ- ಈ ಮೂರು ಗುಂಪುಗಳಿಗೂ ಏಕಕಾಲದಲ್ಲಿ ಹುದ್ದೆಗಳು ಸಿಗದೆ ಹೋದಲ್ಲಿ ರೋಸ್ಟರ್ ಬಿಂದುವಿನಲ್ಲಿ ಎಸ್ಸಿ ಜನರಲ್ ಎಂದು ನಮೂದಿಸುವುದಾಗಿ ಸರ್ಕಾರ ನಿರ್ಧರಿಸಿದೆ. ಹೀಗಾಗಿ ಮಾದಿಗ ಸಮುದಾಯವು ಉನ್ನತ ಹುದ್ದೆಗಳನ್ನು ಪಡೆಯುವುದು ಈಗಲೂ ಮರೀಚಿಕೆಯಂತಾಗಿದೆ. ರೋಸ್ಟರ್ ಬಿಂದು ಸರಿಪಡಿಸಲು ಮತ್ತೆ ಹೋರಾಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಆದರೆ ಬೃಹತ್ ನೇಮಕಾತಿಗಳಲ್ಲಿ ಪ್ರಾತಿನಿಧ್ಯ ಸಿಗುವುದು ಖಚಿತವಾಗಿದೆ.

ಸಮಾಧಾನದ ಸಂಗತಿ ಎಂದರೆ, ಒಳಮೀಸಲಾತಿಯನ್ನು ಎಲ್ಲ ಸಮುದಾಯಗಳು ಒಪ್ಪಿಕೊಳ್ಳಲೇಬೇಕಾದ ಮಟ್ಟಕ್ಕೆ ಚರಿತ್ರೆ ಒಂದು ಹೆಜ್ಜೆ ಮುಂದೆ ಇಟ್ಟಿದೆ. ಒಳಮೀಸಲಾತಿ ಜಾರಿಗೆ ಬಿಡುವುದಿಲ್ಲ ಎನ್ನುತ್ತಿದ್ದವರು ಅನಿವಾರ್ಯವಾಗಿ ಸಾಮಾಜಿಕ ನ್ಯಾಯಕ್ಕೆ ತಲೆಬಾಗಲೇಬೇಕಾಗಿದೆ. ತಪ್ಪು ಸರಿಗಳಾಚೆಯಾದರೂ ಒಳಮೀಸಲಾತಿ ಜಾರಿಗೆ ಬಂದಿದೆ. ಎಷ್ಟೇ ಒತ್ತಡ, ಮೇಲಾಟಗಳಿದ್ದರೂ ಇದ್ದದ್ದರಲ್ಲಿ ತಕ್ಕಮಟ್ಟಿಗೆ ಎಲ್ಲರಿಗೂ ಒಪ್ಪಿಗೆಯಾಗುವಂತಹ ವರ್ಗೀಕರಣವನ್ನು ಮಾಡಿದಂತೆ ಕಾಣುತ್ತಿದೆ. ಬಹುಶಃ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ಮೂರು ವರ್ಷಗಳಲ್ಲಿ ಅತಿಹೆಚ್ಚು ಪೀಕಲಾಟಕ್ಕೆ ಒಳಗಾಗಿದ್ದು ಒಳಮೀಸಲಾತಿ ವಿಚಾರದಲ್ಲೇ ಇರಬಹುದು ಅನಿಸುತ್ತದೆ.

ಒಳಮೀಸಲಾತಿಯ ಕಾವು ಜೋರಾಗಿದ್ದ ತೆಲಂಗಾಣ-ಆಂಧ್ರಪ್ರದೇಶದಲ್ಲಿ ಸುಲಭವಾಗಿ ಜಾರಿಯಾದ ಪರಿಶಿಷ್ಟ ಜಾತಿ ಮೀಸಲಾತಿ ವರ್ಗೀಕರಣ, ಕರ್ನಾಟಕದಲ್ಲಿ ಗೊಂದಲದ ಗೂಡಾಗಿದ್ದಕ್ಕೆ ಕೆಲವು ಕಾರಣಗಳನ್ನು ಹೋರಾಟಗಾರರು ಗುರುತಿಸುತ್ತಾರೆ.

1. ತೆಲಂಗಾಣ ಮತ್ತು ಆಂಧ್ರಪ್ರದೇಶದಲ್ಲಿ ಕರ್ನಾಟಕದಲ್ಲಿ ಇರುವಂತೆ ಸ್ಪೃಶ್ಯ ಸಮುದಾಯಗಳ ಮೇಲಾಟವಿಲ್ಲ. ಕರ್ನಾಟಕದಲ್ಲಿ ಪರಿಶಿಷ್ಟರ ಪಟ್ಟಿಯೊಳಗೆ ಬರುವ ಭೋವಿ, ಲಂಬಾಣಿ ಸಮುದಾಯಗಳು ರಾಜಕೀಯ ಪ್ರಭಾವವನ್ನು ಹೊಂದಿದ್ದು, ಸರ್ಕಾರದ ಮಟ್ಟದಲ್ಲಿ ಒತ್ತಡ ಸೃಷ್ಟಿಸಬಲ್ಲ ಗುಂಪುಗಳಾಗಿ ಬೆಳೆದಿವೆ.

2. ದಲಿತರ ಒಗ್ಗಟ್ಟು ಮುರಿಯದೆ ಕರ್ನಾಟಕದಲ್ಲಿ ಉಳಿಗಾಲವಿಲ್ಲ ಎಂದು ಅರಿತಿರುವ ಕೋಮುವಾದಿ ಶಕ್ತಿಗಳು, ಎಡ-ಬಲ ಸಮುದಾಯಗಳಲ್ಲಿ ಎಕ್ಸ್ಟ್ರೀಮ್ ಗುಂಪುಗಳನ್ನು ಸೃಷ್ಟಿಸಿ, ಅವರ ಮೂಲಕ ಒಡೆದು ಆಳುವ ನೀತಿಯನ್ನು ಜಾರಿಗೆ ತರಲು ಮುಂದಾದರು. ಇದನ್ನು ದಲಿತ ಚಳವಳಿಯ ನಾಯಕರು ಸರಿಯಾಗಿ ಎದುರಿಸುವಲ್ಲಿ ಹಿನ್ನಡೆ ಅನುಭವಿಸಿದರು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR